# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಕಾಶಿ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರು ಖೋಜ್ವಾನ್ ಪ್ರದೇಶದಲ್ಲಿ ನಡೆದ ಅಕ್ಷಯ ಕನ್ಯಾದಾನ ಮಹೋತ್ಸವ 2025ರಲ್ಲಿ ಭಾಗವಹಿಸಿದರು. ಸೋನಭದ್ರದ ರೇಣುಕೂಟ್‌ನ ಬುಡಕಟ್ಟು ಸಮಾಜದ ಪುತ್ರಿ ಚಿ॥ ಸೌ॥ ರಾಜವಂತಿ ಅವರ ಕನ್ಯಾದಾನವನ್ನು ನೆರವೇರಿಸಿ ವಿವಾಹವಾದ ಎಲ್ಲಾ 125 ಜೋಡಿಗಳಿಗೂ ಶುಭ ಹಾರೈಸಿದರು.


ಸಂಪುಟ : 47 | ಸಂಚಿಕೆ : 02 | ವಿಶಾಖ-ಜ್ಯೇಷ್ಠ | ಕಲಿಯುಗಾಬ್ದ 5127 | 15-05-2025 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


# ಅಪ್ರತಿಮ ದೇಶಭಕ್ತ ಕ್ರಾಂತಿವೀರ ಸಾವರ್ಕರ್

■ **ಸುಲಕ್ಷಣಾ ಶರ್ಮಾ**

'ಭಾರತ ರಾಷ್ಟ್ರದ ಕಲ್ಪನೆಯಲ್ಲಿ ಜಾತಿಮತಭೇದ ಉಚಿತವಲ್ಲ ಮತ್ತು ಭಾರತೀಯರು ಪೂಜಿಸಬೇಕಾದುದು ಮಾತೃಭೂಮಿಯನ್ನು, ಪಾಲಿಸಬೇಕಾದುದು ಭಾರತೀಯ ಸಂಸ್ಕೃತಿಯನ್ನು' ಎಂದು ಜನರಿಗೆ ತಿಳಿ ಹೇಳಿದ ಅಪ್ರತಿಮ ದೇಶಭಕ್ತರಲ್ಲಿ ವೀರ ಸಾವರ್ಕರರು ಅಗ್ರಗಣ್ಯರಾಗಿ ನಿಲ್ಲುತ್ತಾರೆ. ತಾಯಿ ಭಾರತಿಯ ಕುರಿತಾಗಿ ಅದೆಷ್ಟು ಬರೆದರೂ ಸವೆಯದ ಅವರ ಲೇಖನಿ, ಅದೆಷ್ಟು ಹೊಗಳಿದರೂ ಸುಸ್ತು ಕಾಣದ ಮುಖ, ಆರದ ದೇಶಭಕ್ತಿಯ ಜ್ಯೋತಿ ನವಭಾರತದ ಯುವಶಕ್ತಿಗೆ ದೇಶಸೇವೆಗೈಯಲು ಪ್ರೇರಣಾದಾಯಕವಾಗಿದೆ.

ತನ್ನ ಯೌವನದ ಕಾಲದಲ್ಲಿ ರಾಷ್ಟ್ರೋತ್ಥಾನಕ್ಕೆ ಶ್ರಮಿಸಿದ ವಿನಾಯಕ ದಾಮೋದರ ಸಾವರ್ಕರರು ದೇಶ ಕಂಡ ಅಪ್ರತಿಮ ದೇಶಭಕ್ತರಲ್ಲಿ ಒಬ್ಬರು. ಬಾಲ್ಯದಲ್ಲಿ ಶಿವಾಜಿ ಮಹಾರಾಜರ ಕಥೆಗಳನ್ನು ಕೇಳಿ ಬೆಳೆದ ವೀರ ಸಾವರ್ಕರರಿಗೆ ಸ್ವರಾಜ್ಯ ಮತ್ತು ಸ್ವಧರ್ಮದ ಬಗ್ಗೆ ಆಸಕ್ತಿ ತಾನಾಗಿಯೇ ಬಂದಿತ್ತು. ಒಂದು ದೇಶದ ಪ್ರಗತಿಯಲ್ಲಿ ಯುವಶಕ್ತಿಯ ಪಾತ್ರ ಏನೆಂದು ಜನರಿಗೆ ತಿಳಿಹೇಳಿದ ವೀರ ಸಾವರ್ಕರರು ಬರಿಯ ಸ್ವಾತಂತ್ರ್ಯ ಸಮರ ಸೇನಾನಿ ಮಾತ್ರವಲ್ಲದೆ ರಾಷ್ಟ್ರೀಯ ಏಕತೆಗೆ ಶ್ರಮಿಸಿದ ಸಮಾಜ ಸುಧಾರಕರೂ ಆಗಿದ್ದರು. ಯುವಜನರಲ್ಲಿ ದೇಶಭಕ್ತಿ ಮೂಡಿದರೆ ಪರಕೀಯರು ಹೇಗೆ ಸಂಕಷ್ಟಕ್ಕೆ ಸಿಲುಕುತ್ತಾರೆ ಎಂಬುದನ್ನು ಯುವ ಕ್ರಾಂತಿಕಾರಿಗಳಾದ ಭಗತ್ ಸಿಂಗ್, ಆಜಾದ್, ರಾಜ್‌ಗುರು ಮುಂತಾದ ಯುವ ಕ್ರಾಂತಿಕಾರಿಗಳ ಮೂಲಕ ಸಾವರ್ಕರರು ಸಂದೇಶವನ್ನು ಕೊಡುತ್ತಾರೆ. ಎಲ್ಲಾ ನಾಗರಿಕರಿಗೆ ಸಮಾನ ಹಕ್ಕುಗಳಿರುವ, ಜಾತಿ-ಮತಗಳ ಆಧಾರದಲ್ಲಿ ಭೇದ ಭಾವ ಇರದ, ಅಲ್ಪ ಸಂಖ್ಯಾತರ ಸಂಸ್ಕೃತಿಗೆ ಪೂರಕವಾಗಿರುವ ಮತ್ತು ಬಹುಸಂಖ್ಯಾತರಿಗೆ ಶಾಸನ ಬದ್ಧ ಅಧಿಕಾರಕ್ಕೆ ಅವಕಾಶ ಇರುವ ಅಖಂಡ ಭಾರತದ ಕಲ್ಪನೆಯು ಸಾವರ್ಕರರ ಮನಸ್ಸಿನಲ್ಲಿತ್ತು.

ಸಿಂಧೂ ಉಗಮಸ್ಥಾನದಿಂದ ದಕ್ಷಿಣ ಸಾಗರದವರೆಗಿನ ಭಾರತ ಭೂಮಿಯನ್ನು ಪುಣ್ಯ ಭೂಮಿ ಎಂದು ಕಾಣುವವನೇ ಹಿಂದೂ ಎಂದು ಬಲವಾಗಿ ನಂಬಿದ್ದ ಸಾವರ್ಕರರು ಜಾತಿ ಪದ್ಧತಿಯನ್ನು ವಿರೋಧಿಸುತ್ತಿದ್ದರು. ಒಂದು ರಾಷ್ಟ್ರದ ಮುನ್ನಡೆಯಲ್ಲಿ ಅದರ ಇತಿಹಾಸದ ಸರಿಯಾದ ಗ್ರಹಿಕೆಯ ಅಗತ್ಯ ಇದೆ ಎಂದು ತಿಳಿದು ಸಾವರ್ಕರರು ಬರೆದ '1857 ಭಾರತದ ಸ್ವಾತಂತ್ರ್ಯ ಸಂಗ್ರಾಮ' ಎಂಬ ಪುಸ್ತಕ ಪ್ರಕಟಣೆಗೆ ಮುಂಚೆ ಎರಡು ದೇಶಗಳಲ್ಲಿ ನಿಷೇಧಕ್ಕೆ ಒಳಗಾಗಿತ್ತು. ಸಾವರ್ಕರರ ಲೇಖನಿಯೇ ಹಾಗೆ! ಕತ್ತಿಯಂತೆ ಹರಿತ! ಮಾತು ಬೆಂಕಿಯ ಕಿಡಿಗಳನ್ನು ಸ್ಫುರಿಸುವಂತಹವುಗಳು. ಆಂಗ್ಲರ ದಬ್ಬಾಳಿಕೆಗೆ ಪ್ರತ್ಯುತ್ತರವಾಗಿ ಅನೇಕ ದೇಶಭಕ್ತರನ್ನು ಪ್ರೇರೇಪಿಸಿದ ಮಾತುಗಳು.

1901ರಲ್ಲಿ ವಿಕ್ಟೋರಿಯಾ ರಾಣಿ ಮರಣವನ್ನಪ್ಪಿದ ಸಂದರ್ಭದಲ್ಲಿ ಸಾವರ್ಕರರು ಲಕ್ಷಾಂತರ ಭಾರತೀಯರ ರಕ್ತಪಾತಕ್ಕೆ ಕಾರಣಳಾದ ಅವಳ ಸಾವಿಗೆ ನಾವು ಶೋಕಾಚರಣೆ ಮಾಡುವ ಅಗತ್ಯವಿಲ್ಲ ಎಂದು ಜನರಿಗೆ ಅರ್ಥವಾಗುವಂತೆ ಹೇಳುತ್ತಾರೆ. 'ಆಂಗ್ಲರು ಮಹಾಸಾಗರವನ್ನು ದಾಟಿ, ನಮ್ಮ ನೆಲದಲ್ಲಿ ಬಂದು ಇಲ್ಲಿನ ಹವೆಗೆ ಒಗ್ಗಿಸಿಕೊಂಡು ಆಡಳಿತವನ್ನು ಕಿತ್ತುಕೊಂಡಿದ್ದಾರೆ ಎಂದಾದರೆ ಅವರ ನೆಲದಲ್ಲಿ ಹೋಗಿ ನಾನೇಕೆ ನನ್ನ ಜನ್ಮಭೂಮಿಯ ಶ್ರೇಷ್ಠತೆಯ ಬಗ್ಗೆ ಹೇಳಬಾರದು?' ಎಂಬ ಆಲೋಚನೆ ಬಂದೊಡನೆ ಅದನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನವನ್ನು ಈ ಸ್ವಾತಂತ್ರ್ಯ ವೀರ ಮಾಡುತ್ತಾರೆ. ದೇಶಸೇವೆಗೆ ವೀರ ಸಾವರ್ಕರರಿಗೆ ಸಮಯದ ಅಭಾವವಿಲ್ಲ, ಭಾರತಾಂಬೆಯ ಗುಣಗಾನ ಮಾಡುವುದಕ್ಕೆ ಲೇಖನಿಯ ಶಾಯಿ ಖಾಲಿಯಾಗುವುದಿಲ್ಲ, ಪರಕೀಯರ ವಿರುದ್ಧ ಮಾತನಾಡಲು ಗಂಟಲ ಪಸೆ ಆರುವುದಿಲ್ಲ.

ಬಂಗಾಳ ವಿಭಜನೆಯ ಸಮಯದಲ್ಲಿ ವಿದೇಶಿ ಉತ್ಪನ್ನಗಳ ಬಹಿಷ್ಕಾರ ಮಾಡಬೇಕೆಂದು ಯುವಶಕ್ತಿಗೆ ಕರೆ ನೀಡಿದ ಸಾವರ್ಕರರು ವಿದೇಶಿ ವಸ್ತ್ರಗಳಿಗೆ ಬೆಂಕಿ ಹಚ್ಚಿದಾಗ ಅವರಲ್ಲಿ ದೇಶಭಕ್ತರನ್ನು ಹುಟ್ಟು ಹಾಕುವ ದೂರಾಲೋಚನೆ ಇತ್ತು. ಚಾಪೇಕರ್ ಸಹೋದರರ, ಮಂಗಲ್ ಪಾಂಡೆಯಂಥ ವೀರರು ಅನುಸರಿಸಿದ ಮಾರ್ಗದಲ್ಲಿ ನಡೆದರೆ ಮಾತ್ರವೇ ಆಂಗ್ಲರು ನಮ್ಮ ದೇಶ ಬಿಟ್ಟು ತೊಲಗುತ್ತಾರೆ ಎಂಬ ವಾಸ್ತವವನ್ನು ಲಂಡನ್‌ನಲ್ಲಿರುವ ಭಾರತೀಯರಿಗೆ ಸ್ಪಷ್ಟಪಡಿಸಲು ಸಾವರ್ಕರರು ಪ್ರಯತ್ನವನ್ನು ಮಾಡುವಾಗ ಅವರ ಸಂಪರ್ಕಕ್ಕೆ ಬಂದ



ಮದನ್ ಲಾಲ್ ಧಿಂಗ್ರಾ ಅಪ್ರತಿಮ ದೇಶಭಕ್ತನಾಗಿ ಬದಲಾದನು. ಭಾರತದಲ್ಲಿ ದಬ್ಬಾಳಿಕೆ ನಡೆಸಿ, ಜನರಿಗೆ ತೊಂದರೆ ನೀಡಿದ್ದ ಕರ್ಜನ್ ವಾಯಿಲಿಯನ್ನು ಸಂಹರಿಸಿ ನಿಶ್ಚಿಂತೆಯಿಂದ ನೇಣುಗಂಬವೇರಿದ ಧಿಂಗ್ರಾ ಯುವಜನರಲ್ಲಿ ಸ್ಫೂರ್ತಿ ತುಂಬಿದ್ದ. ಕ್ರಾಂತಿಕಾರಿಗಳ ಜೊತೆ ಕ್ರೂರವಾಗಿ ನಡೆದು ಕೊಂಡಿದ್ದ ಜಾಕ್ಸನ್ ಎಂಬಾತನು ಲಕ್ಷ್ಮಣ್ ಕಾನ್ಹೇರಿ ಎಂಬ ಹದಿನೆಂಟರ ದೇಶಭಕ್ತನಿಂದ ಪರಲೋಕ ಸೇರಿದ್ದ. ಇದೇ ಕಾರಣಗಳನ್ನು ಇಟ್ಟುಕೊಂಡು ಸರ್ಕಾರವು ಸಾವರ್ಕರರ ಮನೆಯನ್ನು ಜಪ್ತಿ ಮಾಡುತ್ತದೆ. ಈ ಅಪ್ರತಿಮ ದೇಶಭಕ್ತರಿಗೆ ಕಾಲಾಪಾನಿ ಎಂಬ ಆಜೀವ ಪರ್ಯಂತ ಶಿಕ್ಷೆಯನ್ನು 2 ಅವಧಿಗೆ (50 ವರ್ಷ) ವಿಧಿಸಿ ಮಾನಸಿಕವಾಗಿ ಕುಗ್ಗಿಸಲು ಪ್ರಯತ್ನಿಸುತ್ತದೆ. 'ದೇಶಭಕ್ತಿ' ಎಂಬ ಮಹಾಪರಾಧಕ್ಕಾಗಿ ಬ್ರಿಟಿಷ್ ಸರಕಾರವು ವೀರ ಸಾವರ್ಕರರಿಗೆ ಈ ಘೋರ ಶಿಕ್ಷೆಯನ್ನು ವಿಧಿಸುತ್ತದೆ. ಭಾರತದ ಯುವ ಕ್ರಾಂತಿಕಾರಿಗಳನ್ನು ಸಂಘಟಿಸಿ ಆಂಗ್ಲರಿಗೆ ಹೊಸ ಭಯ ಸೃಷ್ಟಿಸಿದ ಸಾವರ್ಕರರ ಕಾರ್ಯಗತಿಗೆ ಕಡಿವಾಣ ಹಾಕುವ ಉದ್ದೇಶದಿಂದ ಎರಡೆರಡು ಕರಿನೀರಿನ ಶಿಕ್ಷೆ ವಿಧಿಸಿದ ಸರಕಾರಕ್ಕೆ ಅವರು ಜೈಲಿನಲ್ಲಿದ್ದರೂ ಅವರ ದೇಶದ ಕಾಯಕಕ್ಕೆ ತಡೆಯೊಡ್ಡಲು ಸಾಧ್ಯವಾಗಲಿಲ್ಲ.

ಅಂಡಮಾನ್‌ನಲ್ಲಿ ರಾಜಕೀಯ ಕೈದಿಗಳಿಗೆ ಇದ್ದ ಗಾಣದಿಂದ ಎಣ್ಣೆ ತೆಗೆಯುವ ಕೆಲಸ ಮತ್ತು ಹಗ್ಗ ಹೊಸೆಯುವ ಕೆಲಸವನ್ನು ಮಾಡಬೇಕಿತ್ತು. ಎತ್ತಿನ ಬದಲಿಗೆ ಮನುಷ್ಯನನ್ನು ಗಾಣಕ್ಕೆ ಕಟ್ಟಿ ನಿರ್ದಿಷ್ಟ ಸಮಯದಲ್ಲಿ ನಿರ್ದಿಷ್ಟ ಪ್ರಮಾಣದ ಎಣ್ಣೆಯನ್ನು ತೆಗೆಯಬೇಕು, ಇಲ್ಲದಿದ್ದರೆ ಕಠಿಣ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಆರೋಗ್ಯ ಹದೆಗಟ್ಟರೂ ಕೇಳುವವರಾರೂ ಇಲ್ಲ. ಜೈಲಿನಲ್ಲಿ ಲೇಖನಿ-ಕಾಗದ ಕೊಡಲಿಲ್ಲ ಎಂಬ ಮಾತ್ರಕ್ಕೆ ಸಾವರ್ಕರರು ಬರೆಯುವುದನ್ನು ನಿಲ್ಲಿಸಲಿಲ್ಲ. ಬದಲಿಗೆ ಒಂದು ಮೊಳೆಯಿಂದ ಗೋಡೆ ಮೇಲೆ ದೇಶಭಕ್ತಿ ಗೀತೆಗಳನ್ನು ಬರೆದರು. ತಮ್ಮ ಅಮ್ಮನ ಕುರಿತಾಗಿ ಬರೆಯುವಾಗ ಕೈಗಳಲ್ಲಿದ್ದ ಕೋಳಗಳು ಭಾರವೆನಿಸಲಿಲ್ಲ, ದೇಹಕ್ಕೆ ಆಯಾಸವಾಗಲಿಲ್ಲ. ಜೈಲಿನಲ್ಲಿ ಹಿಂದೂ ಕೈದಿಗಳಿಗೆ ಆಗುತ್ತಿದ್ದ ಶೋಷಣೆಯನ್ನು, ನಿರಂತರವಾಗಿ ನಡೆಯುತ್ತಿದ್ದ ಮತಾಂತರವನ್ನು ಸಾವರ್ಕರರು ತಡೆಯುತ್ತಾರೆ, 'ಘರ್ ವಾಪಸಿ'ಗೆ ಅವಕಾಶ ಕೊಡುತ್ತಾರೆ.

**ಸಮಾಜ ಸುಧಾರಣೆಯ ಮೂಲಕ ದೇಶಸೇವೆ:** 1921ರಲ್ಲಿ ಜೈಲಿನಿಂದ ಬಿಡುಗಡೆಯಾದ ಸಾವರ್ಕರರು ಅಸ್ಪೃಶ್ಯತೆಯನ್ನು ತೊಡೆದು ಹಾಕವುದಕ್ಕಾಗಿ ಕೆಳಜಾತಿಯೆಂದು ಪರಿಗಣಿಸಿಲ್ಪಟ್ಟವರಿಗೆ ದೇವಾಲಯ ಪ್ರವೇಶ, ಸಹಭೋಜನಗಳನ್ನು ಏರ್ಪಡಿಸಿದರು. 'ದೇಶಕ್ಕೆ ಅಗತ್ಯ ಬಿದ್ದಾಗ ಪೆನ್ನು ಚೆಲ್ಲಿ ಗನ್ನು ಹಿಡಿಯುವವರು ಬೇಕು' ಎಂದು ಯುವಶಕ್ತಿಗೆ ಕರೆ ನೀಡಿದ ಅವರು ಪ್ರಾಯೋಗಿಕ ಚಿಂತನೆ ಇಲ್ಲದೆ ಯಾವುದೇ ಕೆಲಸಕ್ಕೆ ಕೈ ಹಾಕುತ್ತಿರಲಿಲ್ಲ. ಮತಾಂತರದಿಂದ ರಾಷ್ಟ್ರಾಂತರವಾಗುವುದೆಂಬ ವಾಸ್ತವವನ್ನು ಅರ್ಥೈಸಿಕೊಂಡಿದ್ದ ಅವರು ಶುದ್ಧಿ ಚಳುವಳಿ ಮಾಡುತ್ತಿದ್ದರು.

1947ರಲ್ಲಿ ಭಾರತ ದಾಸ್ಯಮುಕ್ತವಾದಾಗ! ಅಖಂಡ ಭಾರತದ ಕನಸು ಈಡೇರಲಿಲ್ಲ ಎಂಬ ಕೊರಗು ಅವರಲ್ಲಿತ್ತು. ಭಾರತ ವಿಭಜಿಸಲ್ಪಟ್ಟಾಗ ಲಕ್ಷಾಂತರ ಅಮಾಯಕ ಜನರ ಕಗ್ಗೊಲೆ, ಅತ್ಯಾಚಾರಗಳಾದವು. ದೇಶದ ವಿಭಜನೆಯ ಈ ದುರಂತಕ್ಕೆ ಕಾರಣರಾದ ಅನೇಕರು ಈ ಹಿಂಸಾಚಾರದ ಸಂದರ್ಭದಲ್ಲಿ ಮೂಕರಾಗಿದ್ದರು. ಸಾವರ್ಕರರು ಬೀಜ ಬಿತ್ತಿ ಬೆಳೆಸಿದ ಸಂಘಟನೆಯಾದ ಅಭಿನವ ಭಾರತದಲ್ಲಿದ್ದ ತರುಣರು ಜನರಲ್ಲಿ ರಾಷ್ಟ್ರೀಯ ಚಿಂತನೆಗಳನ್ನು ತರಲು ಪ್ರಯತ್ನ ಮಾಡುತ್ತಲೇ ಇದ್ದರು. ತಾಯ್ನಾಡಿನಿಂದ ಬಹಳಷ್ಟು ದೂರದಲ್ಲಿದ್ದರೂ ಶಿವಾಜಿ ಜಯಂತಿಯನ್ನು ಆಚರಿಸಿದ ಅಭಿನವ ಭಾರತವು ಲಂಡನ್‌ನಲ್ಲಿ ಬ್ರಿಟಿಷರಿಗೆ ಅಸೂಯೆಯಾಗುವ ರೀತಿಯಲ್ಲಿ ಬೆಳೆದು ನಿಂತಿತ್ತು. ಸಶಸ್ತ್ರ ಕ್ರಾಂತಿಯ ಅಗತ್ಯ ಏನೆಂದು ಮನಗಂಡು ಅನೇಕ ಭಾರತೀಯರು ದೇಶಕ್ಕಾಗಿ ತ್ಯಾಗ ಬಲಿದಾನಗಳನ್ನು ಮಾಡಲು ಸಿದ್ಧರಾಗಿ ಮುಂದೆ ಬರುತ್ತಿದ್ದರು. ಸುಖ್ ದೇವ್, ರಾಜ್ ಗುರು, ಭಗತ್ ಸಿಂಗ್ ಮುಂತಾದ ಕ್ರಾಂತಿಕಾರಿಗಳನ್ನು ಸೃಷ್ಟಿಸಿ ಸ್ವತಂತ್ರ ಭಾರತದ ಕಲ್ಪನೆಯನ್ನು ಸಾಕಾರಗೊಳಿಸಿದ ವೀರ ಸಾವರ್ಕರರು ನಿಜಕ್ಕೂ ಆದರ್ಶ ಪ್ರಾಯರು! ಶಾಂತಿಯ ಜೊತೆ ಜೊತೆಯಲ್ಲಿ ಕ್ರಾಂತಿ ಇದ್ದ ಕಾರಣಕ್ಕೆ ಸಾವಿರದ ಒಂಬೈನೂರ ನಲ್ವತ್ತೇಳರಲ್ಲಿ ಪರಕೀಯರು ಭಾರತವನ್ನು ಅನಿವಾರ್ಯವಾಗಿ ಬಿಡಬೇಕಾಯಿತು. ದೇಶಸೇವೆಗಾಗಿ ಕರೆ ಬಂದರೆ ಸದಾ ಸಿದ್ಧರಾಗಿರಬೇಕೆಂಬ ಸಂದೇಶವನ್ನು ಸಾವರ್ಕರರು ನೀಡುತ್ತಾರೆ.

ಸಾಮಾಜಿಕ ಸಾಮರಸ್ಯ ಕಾಪಾಡುವುದರಲ್ಲಿಯೂ ಸಾವರ್ಕರರದ್ದು ಮುಖ್ಯ ಪಾತ್ರವಿದೆ. ರತ್ನಾಗಿರಿಯಲ್ಲಿ ಇವರು ಕಟ್ಟಿಸಿದ ಪತಿತ ಪಾವನ ಮಂದಿರದಲ್ಲಿ ಎಲ್ಲಾ ಜಾತಿಯವರಿಗೂ ಪ್ರವೇಶ ಕಲ್ಪಿಸಿ, ಅಸ್ಪೃಶ್ಯತೆಯು ರೂಢಿಯಲ್ಲಿ ಬಂದ ಮೂಢನಂಬಿಕೆ ಎಂದು ಜನರಿಗೆ ಮನವರಿಕೆ ಮಾಡಿ ಕೊಟ್ಟರು. ಸ್ವತಃ ಅಂಬೇಡ್ಕರರೇ ತಮ್ಮ ಪತ್ರಿಕೆಯಲ್ಲಿ ಸಾವರ್ಕರರನ್ನು ಹೊಗಳಿದ್ದುದೂ ಇದೆ. ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆ ಎಂಬ ತತ್ವಗಳನ್ನು ಪುನರುಚ್ಚರಿಸಿದ ಸಾವರ್ಕರರಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ಚಿಂತನೆ ಇತ್ತು ಎಂಬುದು ಗಮನಾರ್ಹ ಸಂಗತಿ. ಭಾರತದ ಸಂಸ್ಕೃತಿಯ ಉಳಿವಿಗಾಗಿ, ಸನಾತನ ಧರ್ಮದ ರಕ್ಷಣೆಗಾಗಿ ಶುದ್ಧಿ ಚಳುವಳಿಯನ್ನು ಪ್ರಾರಂಭಿಸಿದ ಸಾವರ್ಕರರಿಗೆ ಮತಾಂತರದಿಂದಾಗಿ ಆಗುವ ಅಪಾಯದ ಅರಿವು ಇತ್ತು.

ಸ್ವದೇಶಿ ಉತ್ಪನ್ನಗಳ ಬಳಕೆಗೆ ಒತ್ತು ಕೊಟ್ಟ ಇವರು ನಮ್ಮ ದೇಶದಲ್ಲಿ ಉತ್ಪಾದಿಸಲ್ಪಟ್ಟ ದಿನೋಪಯೋಗಿ ವಸ್ತುಗಳ ಪರವಾಗಿ ಪ್ರಚಾರ ಮಾಡಿದ್ದರು. ಸ್ವದೇಶಿ ಭಾಷೆಗಳಲ್ಲಿ ಸೇರಿ ಹೋಗಿದ್ದ ಅನೇಕ ಪರದೇಶಿ ಭಾಷಾ ಶಬ್ದಗಳಿಗೆ ಇದ್ದ ಪರ್ಯಾಯವಾದ ಶಬ್ದಗಳನ್ನು ನೆನಪಿಸಿ ಭಾಷೆಗಳ ಶುದ್ಧೀಕರಣವನ್ನೂ ಮಾಡುತ್ತಾರೆ. ಹೀಗೆ ಭಾರತದ ಆತ್ಮನಿರ್ಭರತೆಯ ಅಗತ್ಯತೆಯನ್ನು ಸ್ವಾತಂತ್ರ್ಯ ಪೂರ್ವದಲ್ಲೇ ಅರಿತುಕೊಂಡಿದ್ದರು. ಸುಭಾಷ್‌ಚಂದ್ರ ಬೋಸರ ಇಂಡಿಯನ್ ನ್ಯಾಷನಲ್ ಆರ್ಮಿಯ ಸ್ಥಾಪನೆಗೆ ಸಾವರ್ಕರರು ಪರೋಕ್ಷವಾಗಿ ಕಾರಣರಾಗಿದ್ದರು. ಸಾವರ್ಕರರ ದೂರದರ್ಶಿ ಚಿಂತನೆಗೆ ಇದೇ ಸಾಕ್ಷಿ.

ಸಾವರ್ಕರರ ಚಿಂತನೆಗಳು ಗಹನವಾದ ಅರ್ಥವಿರುವ ಮತ್ತು ಭಾರತದ ಸುಂದರ ನಾಳೆಗಳತ್ತ ಮುಖ ಮಾಡಿದವುಗಳಾಗಿದ್ದವು. ಭಾರತವು ಜಗದ್ಗುರುವಾಗಬೇಕಾದರೆ ಯುವಶಕ್ತಿ ಸಂಘಟಿತವಾಗಬೇಕೆಂದು ಬೋಧಿಸುತ್ತಿದ್ದರು. "ದೇಶಕ್ಕಾಗಿ ಸರ್ವಸ್ವವನ್ನು ತೊರೆದುಕ್ಕೊಳ್ಳುತ್ತೇವೆ ಎಂದುಕ್ಕೊಳ್ಳುವವರು ಜನಪ್ರಿಯತೆಯನ್ನೂ ಸಹ ತ್ಯಜಿಸಬೇಕು. ಸೇವೆಯನ್ನು ಮಾಡುವಾಗ ಜನಹಿತಕ್ಕಾಗಿ ಮಾಡಬೇಕು ಹೊರತು ಜನಸ್ತುತಿಗಾಗಿ ಅಲ್ಲ" – ವೀರ ಸಾವರ್ಕರರು ಇಂತಹ ಧೋರಣೆಯು ಅವರ ಔನ್ನತ್ಯವನ್ನು ತಿಳಿಸುವುದು. ಬೆನ್ನ ಹಿಂದೆ ಚಾಪೇಕರ್ ಸಹೋದರರನ್ನು ಗುರುವೆಂದು ಪರಿಗಣಿಸಿ, ಎದುರಿಗೆ ಸದೃಢ ಭಾರತದ ಗುರಿ ಇಟ್ಟುಕೊಂಡಿದ್ದ ವೀರ ಸಾವರ್ಕರರ ಜೀವನಗಾಥೆ ಯುವಮನಸ್ಸುಗಳಲ್ಲಿ ಹೊಸ ಸಂಚಲನವನ್ನು ಸೃಷ್ಟಿಸುತ್ತದೆ. ಸುಖ, ಆಡಂಬರಗಳನ್ನು ಬಯಸುವ ಈ ಕಾಲದಲ್ಲಿ ಯಾವುದೇ ಸ್ವಂತ ಪ್ರತಿಫಲಾಪೇಕ್ಷೆಯಿಲ್ಲದೆ ಸಮಾಜಕ್ಕಾಗಿ ಬದುಕುವುದು ಎಂದರೆ ದೊಡ್ಡ ಸವಾಲಿನಂತೆ ಕಾಣಿಸುತ್ತದೆ. ಮಾನಸಿಕ ಚಿತ್ರಹಿಂಸೆ ಮತ್ತು ದೈಹಿಕ ಶಿಕ್ಷೆಗಳನ್ನು ಅನುಭವಿಸುವಾಗ ಸಾಮಾನ್ಯನಾದವನು ಆ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳುವನೇ ಹೊರತು ಅವನಿಗೆ ದೇಶಸೇವೆ ಮಾಡುವ ಚಿಂತನೆ ಬಾರದು. ಆದರೆ ಸಾವರ್ಕರರು ಅಸಾಮಾನ್ಯ ವ್ಯಕ್ತಿ, ಎಂತಹ ಪರಿಸ್ಥಿತಿ ಬಂದರೂ ಮನಸ್ಥಿತಿಯನ್ನು ಬದಲು ಮಾಡದೆ, ಭಾರತ ಮಾತೆಯ ಸೇವೆ ಮಾಡುವ ಪಣ ತೊಟ್ಟ ನೈಜ ದೇಶಭಕ್ತರು.

ಮೇರೆಯಿಲ್ಲದ ದೇಶಭಕ್ತಿ, ವಿರಾಮವಿಲ್ಲದ ಜನಸೇವೆ ಎಂಬಿವುಗಳಲ್ಲಿ ಸಾವರ್ಕರರು ಭಾರತೀಯರಿಗೆ ಆದರ್ಶವೆನಿಸುತ್ತಾರೆ. ಆದರೆ ಅವರು ದೇಶಕ್ಕಾಗಿ ಮಾಡಿದ ತ್ಯಾಗವನ್ನು ಪ್ರಶ್ನಿಸುವುದು ಸೂಕ್ತವಲ್ಲ. ಅಭಿನವ ಭಾರತದ ರೂವಾರಿ ನವಭಾರತಕ್ಕೆ ಕೊಟ್ಟ ಕೊಡುಗೆ ಅನನ್ಯವಾದುದು. ನಮ್ಮ ದೇಶವು ವಿಶ್ವಗುರು ಆಗಬೇಕೆಂದರೆ ಯುವಜನತೆ ಸಾವರ್ಕರರ ಹಾದಿಯಲ್ಲಿ ನಡೆಯಬೇಕಿದೆ.

## ಸಂಸ್ಮರಣೆ


# ಆದಿ ಶಂಕರಾಚಾರ್ಯ

ಭಾರತದ ನಾಲ್ಕು ದಿಕ್ಕಿನಲ್ಲೂ ಮಠಗಳನ್ನು ಸ್ಥಾಪಿಸಿ ರಾಷ್ಟ್ರದ ಏಕತೆಗೆ ಕಾರಣದ ಶಂಕರಾಚಾರ್ಯರು ದಾರ್ಶನಿಕರು, ತತ್ವಜ್ಞಾನಿ, ಸಮಾಜ ಸುಧಾರಕರಾಗಿ ವಿಶ್ವಕ್ಕೆ ಬೆಳಕು ನೀಡಿದ ಮಹಾನ್ ಸಂತ. ಅವರು ಸನಾತನ ಹಿಂದೂ ಧರ್ಮವನ್ನು ಪುನರುತ್ಥಾನಗೊಳಿಸಿಲು ಸಾಕಷ್ಟು ಶ್ರಮವಹಿಸಿದರು. "ಅದ್ವೈತ" ತತ್ವವನ್ನು ಪ್ರತಿಪಾದಿಸಿ ಜಗತ್ತಿಗೆ ಸಾರಿದವರು.

**ಪರಿಚಯ:** ಶಂಕರಾಚಾರ್ಯರು ಕೇರಳದ ಕಾಲಡಿ ಎಂಬ ಹಳ್ಳಿಯಲ್ಲಿ ಜನಿಸಿದರು. ಇವರ ತಂದೆ ಶಿವಗುರು, ತಾಯಿ ಆರ್ಯಾಂಬೆ. ಶಂಕರಾಚಾರ್ಯರು ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡರು. ನಂತರದ ದಿನಗಳಲ್ಲಿ ಅಧ್ಯಾತ್ಮದ ಆಸಕ್ತಿ ಹೊಂದಿದ್ದ ಇವರು 12ನೇ ವಯಸ್ಸಿನಲ್ಲಿ ಸನ್ಯಾಸತ್ವವನ್ನು ಸ್ವೀಕರಿಸಿದರು. ಶಂಕರಾಚಾರ್ಯರು ಚಿಕ್ಕವಯಸ್ಸಿನಿಂದಲೂ ಬಹಳ ಪ್ರತಿಭಾವಂತರಾಗಿದ್ದರು.

ಶಂಕರಚಾರ್ಯರು ನರ್ಮದಾ ನದಿ ತೀರದಲ್ಲಿ ಗೋವಿಂದ ಭಗವತ್ಪಾದರನ್ನು ಭೇಟಿಯಾದರು. ಈ ವೇಳೆ ಅವರನ್ನು ತನ್ನ ಗುರುಗಳಾಗಿ ಸ್ವೀಕರಿಸಿದರು. ಅವರಿಂದ ವೇದ, ಉಪನಿಷತ್, ವೇದಾಂತಗಳನ್ನು ಕಲಿತು ಕಾಶಿಗೆ ತೆರಳಿದರು. ಅಲ್ಲಿ ಅವರು ಕೆಲವರನ್ನು ತಮ್ಮ ಶಿಷ್ಯರನ್ನಾಗಿಸಿಕೊಂಡು ಅವರಿಗೆ ವೇದಾಂತದ ಬಗ್ಗೆ ಪಾಠ ಮಾಡಿದರು.

ಶಂಕರಾಚಾರ್ಯರು ಹಿಂದೂ ಧರ್ಮದ ಅತ್ಯಂತ ಪ್ರಭಾವಶಾಲಿ ತತ್ವಜ್ಞಾನಿಗಳಲ್ಲೊಬ್ಬರು. ಅವರು ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು. ಈ ಸಿದ್ಧಾಂತವೂ ಆತ್ಮ ಮತ್ತು ಪರಮಾತ್ಮ ಒಂದೇ ಆಗಿದೆ ಎನ್ನುವುದನ್ನು ಪ್ರತಿಪಾದಿಸುತ್ತದೆ. ಇವರು ಈ ಸಿದ್ಧಾಂತದ ಜ್ಞಾನವನ್ನು ಜನರಿಗೆ ತಿಳಿಸುವ ಸಲುವಾಗಿ ದೇಶಾದ್ಯಂತ ಸಂಚರಿಸಿದರು. ಅಷ್ಟೇ ಅಲ್ಲದೆ ಇವರು ಹಿಂದೂ ಧರ್ಮವನ್ನು ಪುನರುಜ್ಜೀವನಗೊಳಿಸಲು ಶ್ರಮವಹಿಸಿದರು.



**ಸಾಹಿತ್ಯದ ಕೊಡುಗೆ:** ಸೌಂದರ್ಯಲಹರಿ, ಶಿವಾನಂದಲಹರಿ, ನಿರ್ವಾಣ ಶಾಲ್ಕಂ, ಮನೀಷ ಪಂಚಕಂ ಸೇರಿದಂತೆ ಸುಮಾರು 72 ಭಕ್ತಿ ಮತ್ತು ಧ್ಯಾನ ಗೀತೆಗಳನ್ನು ರಚಿಸಿದ್ದಾರೆ. ಅವರು ಬ್ರಹ್ಮ ಸೂತ್ರಗಳು, ಭಗವದ್ಗೀತೆ ಮತ್ತು 12 ಪ್ರಮುಖ ಉಪನಿಷತ್ತುಗಳು ಸೇರಿದಂತೆ 18 ಭಾಷ್ಯ ಗ್ರಂಥಗಳನ್ನು ಬರೆದಿದ್ದಾರೆ. ವಿವೇಕ ಚೂಡಾಮಣಿ, ಆತ್ಮ ಬೋಧ, ವಾಕ್ಯಾವರ್ತಿ, ಉಪದೇಶ ಸಹಸ್ರಿ ಸೇರಿದಂತೆ 23 ಪುಸ್ತಕಗಳನ್ನು ಬರೆದಿದ್ದಾರೆ.

**ನಾಲ್ಕು ಮಠಗಳು:** ಉತ್ತರ ದಿಕ್ಕಿನಲ್ಲಿ ಇರುವ ಬದರಿ ಪೀಠ, ದಕ್ಷಿಣದಲ್ಲಿ ಕರ್ನಾಟಕದ ಶೃಂಗೇರಿಯಲ್ಲಿರುವ ಶೃಂಗೇರಿ ಪೀಠ, ಒರಿಸ್ಸಾದ ಪುರಿಯಲ್ಲಿ ಗೋವರ್ಧನ ಪೀಠ, ಗುಜರಾತದ ದ್ವಾರಕೆಯಲ್ಲಿ ದ್ವಾರಕ ಪೀಠವನ್ನು ಶಂಕರಾಚಾರ್ಯರು ಸ್ಥಾಪಿಸಿದರು. ಇದು ರಾಷ್ಟ್ರದ ಐಕ್ಯತೆ ಮತ್ತು ಅಖಂಡತೆಯನ್ನು ಸಂಕೇತಿಸುತ್ತದೆ.

ಶಂಕರಾಚಾರ್ಯರು ತಮ್ಮ 32ನೇ ವಯಸ್ಸಿನಲ್ಲಿ ಕೇದಾರನಾಥದಲ್ಲಿ ಇಹಲೋಕ ತ್ಯಜಿಸಿದರು.

# ಗ್ರಾಮವಿಕಾಸಕ್ಕೆ ಪಣತೊಟ್ಟ ಅಂಬೇಡ್ಕರ್ ವನವಾಸಿ ಕಲ್ಯಾಣ ಸಂಸ್ಥೆ

ನಶೆಯಲ್ಲಿ ಮುಳುಗೆದ್ದು ಬಂದ ಪತಿಯಿಂದ ಪ್ರತಿದಿನವೂ ಹೊಡೆತ ತಿಂದು, ಎಲ್ಲ ಅಪಮಾನಗಳನ್ನೂ ಸಹಿಸುವ ಬದುಕು ಡಾಂಗ್ ಮತ್ತು ತಾಪೀ ಜಿಲ್ಲೆಯ ಮಹಿಳೆಯರದ್ದಾಗಿತ್ತು. ಗಂಡಸರ ಈ ನಶೆಯ ಚಟ, ಎಷ್ಟೋ ಹೆಂಗಸರನ್ನು ಬಹಳ ಚಿಕ್ಕ ವಯಸ್ಸಿನಲ್ಲೇ ವಿಧವೆಯರನ್ನಾಗಿ ಮಾಡಿಬಿಟ್ಟಿತ್ತು. ವನವಾಸಿ ಗ್ರಾಮದ ಮಹಿಳೆಯರು ಈ ನರಕಸದೃಶ ಬದುಕನ್ನು ಇದ್ದಂತೆ ಸ್ವೀಕರಿಸಿ ಸುಮ್ಮನಾಗಿಬಿಟ್ಟಿದ್ದರು. ಇವರಿಗೆ ಸ್ವಾಭಿಮಾನ ಹಾಗೂ ಸ್ವಾವಲಂಬನೆಯ ಹಾದಿಯನ್ನು ತೋರಿಸಿದ್ದು ಸೂರತ್‌ನ ಅಂಬೇಡ್ಕರ್ ವನವಾಸಿ ಕಲ್ಯಾಣ ಸಂಸ್ಥೆ.

ರಾಷ್ಟ್ರೀಯ ಸೇವಾಭಾರತಿಯ ಸಹಯೋಗದೊಂದಿಗೆ ಈ ಸಂಸ್ಥೆಯು ಡಾಂಗ್ ಮತ್ತು ತಾಪೀ ಜಿಲ್ಲೆಯಲ್ಲಿ 130 ಮಾತೃಮಂಡಲಿಗಳನ್ನು ರಚಿಸಿ, 1600 ಮಹಿಳೆಯರಲ್ಲಿ ಸ್ವಾವಲಂಬನೆ, ಸ್ವಾಭಿಮಾನ ಮತ್ತು ನೇತೃತ್ವದ ಭಾವನೆಗಳನ್ನು ಜಾಗೃತಗೊಳಿಸಿತು. 250 ಗ್ರಾಮಗಳಲ್ಲಿ ರೈತರ ಆದಾಯ ಹೆಚ್ಚಿಸಲು ಅವರಿಗೆ ಜೈವಿಕ ಸಾಗುವಳಿ ಮತ್ತು ಬೀಜ ಉತ್ಪನ್ನದ ಕೌಶಲ್ಯವನ್ನು ಕಲಿಸಿಕೊಟ್ಟಿತು. ಮಾತ್ರವಲ್ಲದೆ ಈ ಸಂಸ್ಥೆಯು ಸೂರತ್‌ನಲ್ಲಿ ಕಳೆದ 9 ವರ್ಷಗಳಿಂದ ಮೇಧಾವಿ ಬಡ ವಿದ್ಯಾರ್ಥಿಗಳಿಗೆ ಕೇವಲ 15,000/– ರೂ. ಶುಲ್ಕ ಪಡೆದು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರು ಮಾಡುತ್ತಿದೆ. ಸಂಭವ್ ಟ್ಯೂಷನ್ ಸೆಂಟರ್ ಪರಿಣಾಮವಾಗಿ ಗುಜರಾತ್‌ನ ವಾಪಿಯಲ್ಲಿ ಸರ್ಕಾರದ ತೆರಿಗೆ ಇಲಾಖೆಯ ಉನ್ನತ ಅಧಿಕಾರಿಯಾಗಿರುವ ಸುನೀಲ್ ಗಾವಿತ್ ಸೇರಿದಂತೆ 50ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಉಚ್ಚ ಸರ್ಕಾರಿ ಪದವಿಗಳನ್ನು ಹೊಂದಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕ ಶ್ರೀ ನರೇಂದ್ರ ಪಂಚಾಸರ ಅವರ ಶ್ರಮದಿಂದ 1999ರಲ್ಲಿ ಪ್ರಾರಂಭವಾದ ಅಂಬೇಡ್ಕರ್ ಸಂಸ್ಥೆಯು ಸಂಸ್ಕಾರ ಕೇಂದ್ರ, ಯುವ ಮಂಡಲಿ, ಭಜನಾ ಮಂಡಲಿ ಮತ್ತು ಮಾತೃಮಂಡಲಿ (ಮಾತೆಯರ ಸ್ವಸಹಾಯ ಸಂಘ) ಇತ್ಯಾದಿಗಳನ್ನು ಆರಂಭಿಸಿ ಈ ವನವಾಸಿ ಗ್ರಾಮಗಳಲ್ಲಿ ವಿಕಾಸದ ಒಂದು ಹೊಸ ಯುಗದ ಸಂಚಲನವನ್ನು ಮೂಡಿಸಿದೆ.



ಸರಳ, ನಿರ್ಮಲ ಹೃದಯವಂತರಾದ ಈ ಅಮಾಯಕ ವನವಾಸಿ ಜನರ ಮೇಲೆ, ಕೆಲವು ವ್ಯಕ್ತಿಗಳು ಅಥವಾ ಕಂಪೆನಿಗಳು ಹೈಬ್ರಿಡ್ ತಳಿಯ ಹೆಸರಿನಲ್ಲಿ, ಕೆಲವು ಸಣ್ಣ ಉದ್ಯಮಗಳ ಹೆಸರಿನಲ್ಲಿ, ಆಮಿಷ ಒಡ್ಡಿ ಮೋಸ ಮಾಡಿದ ಪರಿಣಾಮವಾಗಿ ಈ ಸಮುದಾಯದವರು ಯಾರ ಮೇಲೂ ಭರವಸೆ ಇಡುವುದನ್ನು ನಿಲ್ಲಿಸಿಬಿಟ್ಟಿದ್ದರು.ಈಗ ಸೇವಾಧಾಮದ ಸುದ್ದಿ ಎಲ್ಲಿ ಕಂಡರೂ ಎಷ್ಟೋ ಗ್ರಾಮಗಳ ಜನರು ಕೌತುಕದಿಂದ ಆ ಸುದ್ದಿ ಫಲಕದ ಮುಂದೆ ಒಂದಾಗಿ ನಿಲ್ಲುತ್ತಾರೆ. ಈ ಸಫಲತೆ ಕೆಲವೇ ತಿಂಗಳಲ್ಲಿ ಅಥವಾ ಕೆಲವೇ ದಿನಗಳಲ್ಲಿ ಆದುದಲ್ಲ. ಸರಿಸುಮಾರು 20 ವರ್ಷಗಳ ಕಠಿಣ ಪರಿಶ್ರಮದ ಫಲ ಇದು. ಸಂಸ್ಥೆಯು ಈ ಗ್ರಾಮಗಳಲ್ಲಿ ಸೇವಾಧಾಮ ಎಂಬ ಹೆಸರಿನಿಂದಲೇ ಎಲ್ಲರಿಗೂ ಪರಿಚಿತವಾಗಿದೆ. ಸೇವಾಧಾಮದ ವತಿಯಿಂದ 2003ರಲ್ಲಿ ಆಹವಾ ಗ್ರಾಮದಲ್ಲಿ ಬಾಡಿಗೆ ಮನೆಯೊಂದರಲ್ಲಿ ವಿದ್ಯಾರ್ಥಿನಿಲಯ ಪ್ರಾರಂಭವಾಯಿತು. ಹಾಗೆಯೇ 2005ರಲ್ಲಿ 9 ರಿಂದ 12 ವರ್ಷಗಳವರೆಗಿನ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೋಸ್ಕರ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಲಾಯಿತು.

ಸಂಸ್ಥೆಯಲ್ಲಿ ಸೇವಾ ಮನೋಭಾವದ ಕಾರ್ಯಕರ್ತರ ಪರಿಶ್ರಮದಿಂದ 2006ರಲ್ಲಿ ತಾಪೀ ಜಿಲ್ಲೆಯಲ್ಲಿ ಸೋನಗಡ ತಾಲೂಕಿನ ಗತಾಡೀ ಗ್ರಾಮದಲ್ಲಿ ಗ್ರಾಮವಿಕಾಸ ಕಾರ್ಯವು ಪ್ರಾರಂಭವಾಯಿತು. ಆಧುನಿಕ ಕೃಷಿ, ಬೀಜಗಳ ಉತ್ಪಾದನೆ, ಜಲ ಸಂರಕ್ಷಣೆಗೆ ಕಟ್ಟೆಗಳ ನಿರ್ಮಾಣ, ದೇಸೀ ಉತ್ಪನ್ನ ಮತ್ತು ಜೀವಾಮೃತ ತಯಾರಿ ಮುಂತಾದ ಪ್ರಭಾವಿ ಮಾದರಿಗಳ ಉದಾಹರಣೆಯನ್ನು ಕೃಷಿಕರಿಗೆ ನೀಡಲಾಯಿತು. ಕಾರ್ಯಕರ್ತರ ಪ್ರಯತ್ನಗಳು ಈ 14 ವರ್ಷಗಳಲ್ಲಿ ಗತಾಡೀ ಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ಮಾಡುವಲ್ಲಿ ಯಶಸ್ವಿಯಾಗಿವೆ. ಕೃಷಿ ಉತ್ಪನ್ನಗಳಿಗೆ ಯೋಗ್ಯವಾದ ಬೆಲೆ ಸಿಗುವ ಸಲುವಾಗಿ ಕೃಷಿಮೇಳಗಳನ್ನೂ ಆಯೋಜಿಸಲಾಯಿತು. ಮಾತೃಮಂಡಲಿಗಳು (ಮಾತೆಯರ ಸ್ವಸಹಾಯ ಸಂಘಗಳು) ಪಾನಮತ್ತ ಗಂಡಂದಿರಿಗೆ ಚಿಕಿತ್ಸೆಯನ್ನೂ ಪ್ರಾರಂಭ ಮಾಡಿವೆ. ಡಾಂಗ್ ಜಿಲ್ಲೆಯ ಜಾಮಲಾಪಾಡಾ ಗ್ರಾಮದಲ್ಲಂತೂ ಪುಷ್ಪಾ ಬೆನ್ ಪವಾರ್ ಅವರ ನೇತೃತ್ವದಲ್ಲಿ, 10 ಮಹಿಳೆಯರು 25,000 ರೂಪಾಯಿಗಳ ಸಾಲ ತೆಗೆದುಕೊಂಡು ಅಕ್ಕಿಯ ಮಂಡಿಯನ್ನು ಶುರುಮಾಡಿದರು ಮತ್ತು ಒಂದೇ ವರ್ಷದಲ್ಲಿ ಅವರು ತಮ್ಮದೇ ಗಳಿಕೆಯಿಂದ ಸಾಲವನ್ನು ತೀರಿಸಿದರು. ಇಂದಿಗೂ ಸಂಘದ ಕಾರ್ಯಕರ್ತರು ಭೂಪೇಂದ್ರ ಪಟೇಲ ಮತ್ತು ಲಲಿತ್ ಬನ್ಸಲ್ ಅವರೊಂದಿಗೆ ಕೈಜೋಡಿಸಿ, ಈ ಗ್ರಾಮಗಳ ಚಿತ್ರಣವನ್ನು ಬದಲಾಯಿಸುವುದರಲ್ಲಿ ತಮ್ಮ ನಿರಂತರ ಪರಿಶ್ರಮವನ್ನು ಹಾಕುತ್ತಲೇ ಇದ್ದಾರೆ.


ಸಂಪರ್ಕ – ತುಲಸೀ ಭಾಯಿಭವಾನಿ, ಮೊಬೈಲ್ – 09724443311

## ಪುಸ್ತಕ ಪರಿಚಯ

## ಬೆಳಕು ಒಂದು ಇಳೆಗೆ ಬಂದು

**ಲೇಖಕರು:** ಪ್ರಕಾಶ್ ಮಲ್ಪೆ
**ಪ್ರಕಾಶನ:** ಅಯೋಧ್ಯಾ ಪಬ್ಲಿಕೇಶನ್ಸ್
**ಬೆಲೆ:** ರೂ.150

ಖ್ಯಾತ ವಾಗ್ಮಿ, ಚಿಂತಕ, ಲೇಖಕ ಪ್ರಕಾಶ್ ಮಲ್ಪೆ ಅವರು ಬರೆದಿರುವ ಈ ವಿಶಿಷ್ಟ ಕೃತಿಯಲ್ಲಿ ಶ್ರೀರಾಮ, ಹನುಮಂತ ಮುಂತಾದ ಪೌರಾಣಿಕ ವ್ಯಕ್ತಿಗಳಿಂದ ಹಿಡಿದು ಡಾ. ಅಂಬೇಡ್ಕರ್, ಪಂಡಿತ ದೀನದಯಾಳು ಉಪಾಧ್ಯಾಯ, ಡಾ. ಹೆಡಗೆವಾರ್, ವರಕವಿ ದ.ರಾ. ಬೇಂದ್ರೆ, ಸರ್ದಾರ್ ವಲ್ಲಭಭಾಯಿ ಪಟೇಲ್, ಲಾಲ್ ಬಹದ್ದೂರ್ ಶಾಸ್ತ್ರಿ ಮುಂತಾದ ದೇಶದ ಐತಿಹಾಸಿಕ ವ್ಯಕ್ತಿಗಳವರೆಗೆ ಜೀವನ ವಿವರಗಳಿವೆ. ಈ ಮಹಾಪುರುಷರ ಜೀವನದ ಘಟನೆಗಳನ್ನಷ್ಟೇ ಹೇಳಿದ್ದರೆ ಇದೊಂದು ಜೀವನವೃತ್ತಾಂತವಾಗುತ್ತಿತ್ತು. ಆದರೆ ಪ್ರಕಾಶರು ಬರೆದಿರುವ ವ್ಯಕ್ತಿಚಿತ್ರಣಗಳು, ಕೇವಲ ಬದುಕಿನ ಹಂತಗಳನ್ನಷ್ಟೇ ವಿವರಿಸದೆ ವ್ಯಕ್ತಿಗಳ ಬದುಕುಗಳ ಒಳಹೊಕ್ಕು ವ್ಯಕ್ತಿತ್ವ ಚಿತ್ರಣವನ್ನೂ ಮಾಡುತ್ತವೆ. ಹಾಗಾಗಿ ಇಲ್ಲಿ ಆಯಾ ವ್ಯಕ್ತಿಗಳ ಬದುಕಿನ ಅನೇಕ ಸಂದರ್ಭಗಳು, ಅವುಗಳಲ್ಲಿ ಆಯಾ ವ್ಯಕ್ತಿಗಳು ನಡೆದುಕೊಂಡ ರೀತಿ, ಅವರ ಆಲೋಚನಾ ಸರಣಿ, ಅವರಲ್ಲಿದ್ದ ವಿಶಿಷ್ಟ ಗುಣಗಳು, ಅನನ್ಯ ಸಾಮರ್ಥ್ಯಗಳು – ಇವೆಲ್ಲವೂ ಅತ್ಯಂತ ಸ್ಪಷ್ಟವಾಗಿ ಕಾಣಿಸಿಕೊಂಡಿವೆ. ಆ ದೃಷ್ಟಿಯಿಂದ ಇದೊಂದು ಜೀವನ ಮಾರ್ಗದರ್ಶಿ ಕೃತಿಯೂ ಆಗಿದೆ.




ಪುಸ್ತಕಕ್ಕಾಗಿ ಸಂಪರ್ಕಿಸಿ: 7795827307, 6360581957

## ಸಮಯಪಾಲನೆ

ನಾಗರಿಕ ಶಿಷ್ಟಾಚಾರ

ನಮ್ಮ ಸಮಯವನ್ನು ಸದುಪಯೋಗಪಡಿಸಿಕೊಂಡರೆ, ಜೀವನವನ್ನು ಗಟ್ಟಿ ಮಾಡಿಕೊಳ್ಳಬಹುದು ಎಂಬುದು ಸಾರ್ವಕಾಲಿಕ ಕಿವಿಮಾತು. ಏಕೆಂದರೆ ಎಲ್ಲದಕ್ಕೂ ಇಲ್ಲಿ ಸಮಯ ಎನ್ನುವುದು ಮುಖ್ಯ. ಆದರೆ, ಈ ಕಾಲದ ಮಹತ್ವ ಅರಿತವರು ಕೆಲವೇ ಕೆಲವರು. ಮಹತ್ವ ಅರಿತು ಅದನ್ನು ಪಾಲಿಸಿದವರು ಸಾಧಕರಾದರು. ಎಲ್ಲಕ್ಕಿಂತ ಹೆಚ್ಚಾಗಿ ಈ ಕಾಲವೆನ್ನುವುದು ಯಾರಿಗೂ ಎಂದಿಗೂ ನಿಲ್ಲುವುದಿಲ್ಲ. ಅದನ್ನು ನಾವು ಪಾಲಿಸಿದರೆ ಅದು ನಮ್ಮನ್ನು ಪೋಷಿಸುತ್ತದೆ. ಅಸಡ್ಡೆ ತೋರಿದರೆ ಬಿಟ್ಟು ಸಾಗುತ್ತದೆ. ಯಾರೊಬ್ಬರೂ ಹುಟ್ಟಿನಿಂದಲೇ ಜಾಣರಿರುವುದಿಲ್ಲ. ಎಲ್ಲರಲ್ಲೂ ಒಂದು ಪ್ರತಿಭೆ ಇದ್ದೇ ಇರುತ್ತದೆ. ಅದನ್ನು ಸಮಯಪ್ರಜ್ಞೆ ಮೂಲಕ ಬೆಳೆಸಿಕೊಂಡು ಪಾಲಿಸಿಕೊಂಡು ಹೋದರೆ ಯಶಸ್ಸು ಖಚಿತ. ಸತತ ಪರಿಶ್ರಮ ಎಲ್ಲ ಕ್ಷೇತ್ರಗಳಲ್ಲಿನ ಯಶಸ್ಸಿನ ಗುಟ್ಟು. ಸೋಲೇ ಗೆಲುವಿನ ಸೋಪಾನ ಎಂದುಕೊಂಡು ಸೋತರೂ ಧೃತಿಗೆಡದೆ ನಿರಂತರ ಯತ್ನ ಮಾಡಿದ್ರೆ ಆದಲ್ಲಿ ಗೆಲುವು ನಮ್ಮದೇ. ಈ ಗೆಲುವಿನ ಜೊತೆಗೆ ನಮ್ಮ ದಿನನಿತ್ಯದ ಜೀವನದಲ್ಲಿ ಸಮಯಪಾಲನೆ ಎನ್ನುವುದು ನಮ್ಮ ವ್ಯಕ್ತಿತ್ವದ ಶೋಭೆಯನ್ನು ಹೆಚ್ಚಿಸುತ್ತದೆ. ನಮ್ಮ ವೃತ್ತಿ ಜೀವನದಲ್ಲಿ ಮತ್ತು ಉಳಿದ ಸಮಯದಲ್ಲಿ ಹೇಳಿದ ಸಮಯಕ್ಕೆ ಸರಿಯಾಗಿ ನಮ್ಮ ಸಮಯವನ್ನು ಪಾಲಿಸುವುದು ನಮ್ಮ ಮಾತಿಗೊಂದು ತೂಕವನ್ನೂ, ನಮ್ಮ ವ್ಯಕ್ತಿತ್ವಕ್ಕೊಂದು ಮನ್ನಣೆಯನ್ನೂ ದೊರಕಿಸಿಕೊಡುವುದರಲ್ಲಿ ಸಂಶಯವಿಲ್ಲ.



ಸಂಪಾದಕೀಯ ಸಹಕಾರ: ಸುಲಕ್ಷಣಾ ಶರ್ಮಾ, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯಕೃಷ್ಣ ಹೆಚ್ ವಿ, ಗಿರಿಧರ್ ಉದ್ಯಾವರ

# ಸಾಲುದ್ದದ ಸುದ್ದಿಗಳು

## ನ್ಯಾಯಮೂರ್ತಿ ಭೂಷಣ್ ರಾಮಕೃಷ್ಣ ಗವಾಯಿ ಭಾರತದ ಮುಂದಿನ ಸಿಜೆಐ ಆಗಿ ನೇಮಕ



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನ್ಯಾಯಮೂರ್ತಿ ಭೂಷಣ್ ರಾಮಕೃಷ್ಣ ಗವಾಯಿ ಅವರನ್ನು ಭಾರತದ ಮುಂದಿನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಆಗಿ ನೇಮಕ ಮಾಡಿದ್ದಾರೆ ಎಂದು ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ತಿಳಿಸಿದ್ದಾರೆ. ಹಾಲಿ ಸಿಜೆಐ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ಅಧಿಕಾರದಿಂದ ನಿವೃತ್ತರಾದ ಒಂದು ದಿನದ ನಂತರ, ಮೇ 14 ರಂದು ನ್ಯಾಯಮೂರ್ತಿ ಗವಾಯಿ ಅವರು ಸಿಜೆಐ ಆಗಿ ಅಧಿಕಾರ ವಹಿಸಿಕೊಂಡಿದ್ದಾರೆ.

## 2025ರ ಏಪ್ರಿಲ್‌ನಲ್ಲಿ ₹2.37 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ: ಸಾರ್ವಕಾಲಿಕ ದಾಖಲೆ

ಏಪ್ರಿಲ್ ತಿಂಗಳಿನಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹವು ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 12.6ರಷ್ಟು ಹೆಚ್ಚಾಗಿದ್ದು, ದಾಖಲೆಯ ₹2.37 ಲಕ್ಷ ಕೋಟಿಗಳಿಗೆ ತಲುಪಿದೆ ಎಂದು ಗುರುವಾರ ಸರ್ಕಾರಿ ಅಂಕಿ ಅಂಶಗಳಿಂದ ತಿಳಿದುಬಂದಿದೆ. ಇದು ಸಾರ್ವಕಾಲಿಕ ದಾಖಲೆಯಾಗಿದೆ. ದೇಶೀಯ ವಹಿವಾಟುಗಳಿಂದ ಜಿಎಸ್‌ಟಿ ಆದಾಯವು ಶೇ 10.7 ರಷ್ಟು ಹೆಚ್ಚಾಗಿ ಸುಮಾರು ₹1.9 ಲಕ್ಷ ಕೋಟಿಗಳಿಗೆ ತಲುಪಿದ್ದರೆ, ಆಮದು ಮಾಡಿಕೊಂಡ ಸರಕುಗಳಿಂದ ಬರುವ ಆದಾಯವು ಶೇ 20.8ರಷ್ಟು ಹೆಚ್ಚಾಗಿ ₹46,913 ಕೋಟಿಗಳಿಗೆ ತಲುಪಿದೆ.

## 2026ರ ಏಷ್ಯನ್ ಗೇಮ್ಸ್‌ಗೆ ಮಿಶ್ರ ಮಾರ್ಷಲ್ ಆರ್ಟ್ಸ್ ಸೇರ್ಪಡೆ

ಜಪಾನ್ ಆತಿಥ್ಯದಲ್ಲಿ ಮುಂದಿನ ವರ್ಷದ ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ನಡೆಯಲಿರುವ ಏಷ್ಯನ್ ಕ್ರೀಡೆಗಳಲ್ಲಿ ಮಿಶ್ರ ಮಾರ್ಷಲ್ ಆರ್ಟ್ಸ್ (ಎಂಎಂಎ) ಮೊದಲ ಬಾರಿಗೆ ಸೇರ್ಪಡೆಯಾಗಲಿದೆ ಎಂದು ಆಯೋಜಕರು ತಿಳಿಸಿದ್ದಾರೆ. ಆತಿಥ್ಯದ ನಗರಿ ನಗೋಯಾದಲ್ಲಿ ನಡೆದ ಸಭೆಯಲ್ಲಿ ಕ್ರಿಕೆಟ್ ಸೇರ್ಪಡೆಗೂ ಔಪಚಾರಿಕ ಅನುಮೋದನೆ ದೊರೆತಿದೆ. ಆದರೆ ಟೂರ್ನಿ ಎಲ್ಲಿ



ನಡೆಯಲಿದೆ ಎಂಬ ಬಗ್ಗೆ ಅನುಮಾನಗಳು ಉಳಿದಿವೆ. ಮಿಶ್ರ ಮಾರ್ಷಲ್ ಆರ್ಟ್ಸ್‌ನಲ್ಲಿ ಆರು ಸ್ಪರ್ಧೆಗಳಿರಲಿವೆ. ಸಮರ ಕ್ರೀಡೆಗಳ (ಕಾಂಬ್ಯಾಟ್ ಸ್ಪೋರ್ಟ್ಸ್) ವಿಭಾಗದಡಿ ಇದು ಬರಲಿದೆ ಎಂದು ಏಷ್ಯಾ ಒಲಿಂಪಿಕ್ ಕೌನ್ಸಿಲ್ ತಿಳಿಸಿದೆ.

## ಮಲೇಷ್ಯಾದಲ್ಲಿ ವಿಶ್ವದ ಮೊದಲ ಕೃತಕ ಬುದ್ಧಿಮತ್ತೆ ದೇವರು



ದಕ್ಷಿಣ ಮಲೇಷ್ಯಾದ ತಾವೋಯಿಸ್ಟ್ ದೇವಾಲಯ ಧಾರ್ಮಿಕ ಆವಿಷ್ಕಾರವೊಂದರಲ್ಲಿ ವಿಶ್ವದ ಮೊದಲ ಕೃತಕ ಬುದ್ಧಿಮತ್ತೆ ಚಾಲಿತ ದೇವತೆ ಎಂದು ಹೇಳಿಕೊಳ್ಳುವ ಎಐ ಮಜು ಪ್ರತಿಮೆಯನ್ನು ಪರಿಚಯಿಸಿದೆ. ಇದು ಚೀನಾದ ಸಮುದ್ರ ದೇವತೆ ಮಜುವಿನ ಡಿಜಿಟಲ್ ಆವೃತ್ತಿ. ಈ ಯೋಜನೆ ಸಂಪ್ರದಾಯವನ್ನು ತಂತ್ರಜ್ಞಾನದೊಂದಿಗೆ ಬೆಸೆಯುತ್ತದೆ ಎಂದು ಚೀನಾದ ಪತ್ರಿಕೆಯೊಂದು ವರದಿ ಮಾಡಿದೆ. ಜೋಹೋರ್‌ನ ತಿಯಾ ದೇವಾಲಯ ದಲ್ಲಿರುವ ಎಐ ಮಜು, ಪರದೆಯ ಮೇಲೆ ಸಾಂಪ್ರದಾಯಿಕ ಚೀನೀ ಉಡುಪನ್ನು ಧರಿಸಿರುವ ಸುಂದರ ಮಹಿಳೆಯಾಗಿ ಕಾಣಿಸಿಕೊಂಡಿದ್ದಾಳೆ. ದೇವಾಲಯ ಭಕ್ತರಿಗೆ ಆಶೀರ್ವಾದ ಕೇಳಲು, ಭವಿಷ್ಯದ ಅದೃಷ್ಟದ ಬಗ್ಗೆ ದೇವರ ಮಾತು ಕೇಳಲು ಮತ್ತು ವೈಯಕ್ತಿಕ ಪ್ರಶ್ನೆಗಳನ್ನು ಕೇಳಲು ಅವಕಾಶ ನೀಡಿದೆ. ಪ್ರಶ್ನೆಗಳಿಗೆ ಎಐ ದೇವಿ ಸೌಮ್ಯ ಧ್ವನಿ ಮತ್ತು ಆಧ್ಯಾತ್ಮಿಕ ಜ್ಞಾನದ ಮೂಲಕ ಪ್ರತಿಕ್ರಿಯಿಸುತ್ತಾಳೆ ಎಂದು ವರದಿಯಾಗಿದೆ.

## ದೇಶದ ಭದ್ರತೆಗಾಗಿ ಸ್ಪೈವೇರ್ ಬಳಕೆ ತಪ್ಪಲ್ಲ: ಸುಪ್ರೀಂ

ಇಸ್ರೇಲ್‌ನ ಗೂಢಾಚಾರಿಕೆ ಸಾಫ್ಟ್‌ವೇರ್ ಪೆಗಾಸಸ್ ಅನ್ನು ಭಯೋತ್ಪಾದಕರ ವಿರುದ್ಧ ಅಥವಾ ಭದ್ರತೆಗಾಗಿ ಬಳಕೆ ಮಾಡುವುದರಲ್ಲಿ ಯಾವುದೇ ತಪ್ಪಿಲ್ಲ. ಎಂದು ಸುಪ್ರೀಂಕೋರ್ಟ್ ಖಡಕ್ಕಾಗಿ ಹೇಳಿದೆ. ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಎನ್.ಕೋಟಿಶ್ವರ್ ಸಿಂಗ್ ಅವರಿದ್ದ ದ್ವಿಸದಸ್ಯ ಪೀಠವು ಈ ಬಗ್ಗೆ ವಿಚಾರಣೆ ನಡೆಸಿದ್ದು, ಈ ಕುರಿತು ನಡೆದ ತನಿಖಾ ಸಮಿತಿಯ ವರದಿಯನ್ನು ಬಹಿರಂಗಗೊಳಿಸಲು ಸಾಧ್ಯವಿಲ್ಲ ಎಂದು ಹೇಳಿದೆ. ದೇಶದ ಭದ್ರತೆ ಮತ್ತು ಸೌರ್ವಭೌಮತ್ವಕ್ಕೆ ಅಡ್ಡಿ ಮಾಡುವ ಯಾವುದೇ ವರದಿಯನ್ನು ಸಾರ್ವಜನಿಕಗೊಳಿಸುವುದಿಲ್ಲ ಎಂದೂ ತಿಳಿಸಿದೆ.

## ಮೊದಲ ವಿಶ್ವ ಆಡಿಯೋ ದೃಶ್ಯ ಮತ್ತು ಮನರಂಜನಾ ಶೃಂಗಸಭೆ ಉದ್ಘಾಟನೆ



ಮೋದಿ ಮುಂಬೈನ ಜಿಯೋ ವರ್ಲ್ಡ್ ಸೆಂಟರ್‌ನಲ್ಲಿ ನಡೆದ ಮೊದಲ ವಿಶ್ವ ಆಡಿಯೋ ದೃಶ್ಯ ಮತ್ತು ಮನರಂಜನಾ ಶೃಂಗಸಭೆಯಾದ WAVES (World Audio Visual Entertainment Summit) 2025 ಅನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು. ಶೃಂಗಸಭೆಯು 10,000ಕ್ಕೂ ಹೆಚ್ಚು ಪ್ರತಿನಿಧಿಗಳು, 1,000 ಸೃಷ್ಟಿಕರ್ತರು, 300ಕ್ಕೂ ಹೆಚ್ಚು ಕಂಪನಿಗಳು ಮತ್ತು 100 ಕ್ಕೂ ಹೆಚ್ಚು ದೇಶಗಳಿಂದ 350 ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳ ಪ್ರಭಾವಶಾಲಿ ಭಾಗವಹಿಸುವಿಕೆಯನ್ನು ಆಕರ್ಷಿಸಿದೆ. WAVES ಕೇವಲ ಸಂಕ್ಷಿಪ್ತ ರೂಪವಲ್ಲ, ಇದು ಸಂಸ್ಕೃತಿ, ಸೃಜನಶೀಲತೆ, ಚಲನಚಿತ್ರ ಸಂಗೀತ, ಗೇಮಿಂಗ್, ಕಥೆ ಹೇಳುವಿಕೆಯ ಅಲೆ ಎಂದು ಪ್ರಧಾನಿ ಹೇಳಿದರು.

# ರಾಸಾಯನಿಕ ಮುಕ್ತ ತರಕಾರಿ ಬಳಕೆಗೆ ಒತ್ತು ನೀಡಿ ಹೈಡ್ರೋಪೋನಿಕ್ ಫಾರ್ಮ್ ನಿರ್ಮಿಸಿದ ಮಹಿಳೆ

ಪ್ರೇರಣಾ

ಕೇರಳದ ಕೊಟ್ಟಾಯಂನ 29 ವರ್ಷದ ಗೃಹಿಣಿ ಗ್ರೇಸ್ ಆಂಟನಿ ತಮ್ಮ ಮಕ್ಕಳಿಗೆ ಕೀಟನಾಶಕ ಮುಕ್ತ ತರಕಾರಿಗಳನ್ನು ಒದಗಿಸಲು ಹೊರಟಾಗ, ಅದು ಯಶಸ್ವಿ ವ್ಯವಹಾರಕ್ಕೆ ಕಾರಣವಾಗುತ್ತದೆ ಎಂದು ಅವರು ಎಂದಿಗೂ ಊಹಿಸಿರಲಿಲ್ಲ. ಅವರ ಹಿತ್ತಲಿನಲ್ಲಿ ಒಂದು ಸಣ್ಣ ಪ್ರಯೋಗವಾಗಿ ಪ್ರಾರಂಭವಾದದ್ದು ಈಗ 2,500 ಚದರ ಅಡಿ ವಿಸ್ತೀರ್ಣದ ಹೈಡ್ರೋಪೋನಿಕ್ಸ್ ಫಾರ್ಮ್ ಆಗಿ ಬೆಳೆದಿದೆ, ಆರೋಗ್ಯ ಪ್ರಜ್ಞೆ ಹೊಂದಿರುವ ಗ್ರಾಹಕರಿಗೆ ತಾಜಾ, ಸಾವಯವ ಎಲೆಗಳ ಸೊಪ್ಪನ್ನು ಪೂರೈಸುತ್ತದೆ ಮತ್ತು ಅವರಿಗೆ ಸ್ಥಿರ ಆದಾಯವನ್ನು ಗಳಿಸುವಂತಾಗಿದೆ.

ವಾಣಿಜ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ಗ್ರೇಸ್‌ಗೆ ಕೃಷಿಯಲ್ಲಿ ಯಾವುದೇ ಅನುಭವವಿರಲಿಲ್ಲ. ಆದರೆ ಮಾರುಕಟ್ಟೆಯಲ್ಲಿ ಲಭ್ಯವಿರುವ ತರಕಾರಿಗಳಲ್ಲಿ ಕೀಟನಾಶಕಗಳ ಬಳಕೆಯು ಹೆಚ್ಚುತ್ತಿರುವ ಬಗ್ಗೆ ಅವರ ಆಳವಾದ ಕಾಳಜಿಯು ಅವರನ್ನು ತಮ್ಮ ಮನೆಯಲ್ಲಿಯೇ ಸಣ್ಣ ಪ್ರಮಾಣದಲ್ಲಿ ತರಕಾರಿಗಳನ್ನು ಬೆಳೆಯಲು ಪ್ರಾರಂಭಿಸುವಂತೆ ಮಾಡಿತು.

ಅವರ ಪ್ರಯೋಗವು ಸಕಾರಾತ್ಮಕ ಫಲಿತಾಂಶಗಳನ್ನು ನೀಡುತ್ತಿದ್ದಂತೆ, ಅವರು ಪರ್ಯಾಯ ಕೃಷಿ ವಿಧಾನಗಳ ಬಗ್ಗೆ ಸಂಶೋಧನೆ ನಡೆಸಲು ಪ್ರಾರಂಭಿಸಿದರು ಮತ್ತು ಸಸ್ಯಗಳನ್ನು ಬೆಳೆಸಲು ಪೋಷಕಾಂಶ–ಸಮೃದ್ಧ ನೀರನ್ನು ಬಳಸುವ ಮಣ್ಣಿನ–ಕಡಿಮೆ ಕೃಷಿ ತಂತ್ರವಾದ ಹೈಡ್ರೋಪೋನಿಕ್ಸ್ ಅನ್ನು ಕಂಡುಕೊಂಡರು. ಶೀಘ್ರದಲ್ಲೇ, ಅವರು ತಮ್ಮ 12 ಸೆಂಟ್ಸ್ ಭೂಮಿಯಲ್ಲಿ ಪಾಲಕ್, ಲೆಟಿಸ್, ಸೌತೆಕಾಯಿ, ಮೈಕ್ರೋ–ಗ್ರೀನ್ಸ್ ಮತ್ತು ತುಳಸಿ ಎಲೆಗಳಂತಹ ಇತರ ಗಿಡಮೂಲಿಕೆಗಳನ್ನು ಬೆಳೆಯಲು ಹೈಡ್ರೋಪೋನಿಕ್ ಫಾರ್ಮ್ ಅನ್ನು ಸ್ಥಾಪಿಸಲು ನಿರ್ಧರಿಸಿದರು.

"ಸಂಪೂರ್ಣ ಸ್ವಯಂಚಾಲಿತ ಫಾರ್ಮ್ ಅನ್ನು ಸ್ಥಾಪಿಸಲು ನಾವು ಸುಮಾರು 35 ಲಕ್ಷ ಹೂಡಿಕೆ ಮಾಡಿದ್ದೇವೆ. ಫೆಬ್ರವರಿ ಮೊದಲ ವಾರದಲ್ಲಿ ಫಾರ್ಮ್ ಕಾರ್ಯಾರಂಭವಾಯಿತು ಮತ್ತು ಮಾರ್ಚ್ ವೇಳೆಗೆ ನಾವು ಮೂರು ಕೊಯ್ಲುಗಳನ್ನು ಪೂರ್ಣಗೊಳಿಸಿದ್ದೇವೆ. ನಮ್ಮಿಂದ ನಿಯಮಿತವಾಗಿ ತರಕಾರಿಗಳನ್ನು ಖರೀದಿಸುವ ಗ್ರಾಹಕರ ನೆಲೆ ನಮಗಿದೆ. ಮಾರುಕಟ್ಟೆಯಲ್ಲಿ ಕೀಟನಾಶಕ – ಮುಕ್ತ ತರಕಾರಿಗಳಿಗೆ ಭಾರಿ ಬೇಡಿಕೆಯಿದೆ," ಎಂದು ಅವರು ಹೇಳಿದರು.

ಅವರ ಫಾರ್ಮ್ ಕನಿಷ್ಠ ನೀರಿನ ಬಳಕೆಯೊಂದಿಗೆ ಕಾರ್ಯನಿರ್ವಹಿಸುತ್ತದೆ – ಸಾಂಪ್ರದಾಯಿಕ ಕೃಷಿಗಿಂತ ಸುಮಾರು 90% ಕಡಿಮೆ – ಮತ್ತು ಮಣ್ಣಿನಿಂದ ಹರಡುವ ರೋಗಗಳಿಲ್ಲದೆ ಹೆಚ್ಚಿನ ಇಳುವರಿಯನ್ನು ನೀಡುತ್ತದೆ. ಶುದ್ಧ, ತ್ಯಾಜ್ಯ–ಮುಕ್ತ ತರಕಾರಿಗಳು ವೈದ್ಯರು, ಆರೋಗ್ಯ ಪ್ರಜ್ಞೆಯ ಕುಟುಂಬಗಳು ಮತ್ತು ರೆಸ್ಟೋರೆಂಟ್‌ಗಳನ್ನು ಒಳಗೊಂಡಂತೆ ಮೀಸಲಾದ ಗ್ರಾಹಕ ನೆಲೆಯನ್ನು ಕಂಡುಕೊಂಡಿವೆ.



"ಸುಸ್ಥಿರ ಕೃಷಿಯನ್ನು ಉತ್ತೇಜಿಸುವುದರ ಜೊತೆಗೆ ರಾಸಾಯನಿಕ ಮುಕ್ತ ತರಕಾರಿಗಳನ್ನು ಹೆಚ್ಚಿನ ಜನರಿಗೆ ಲಭ್ಯವಾಗುವಂತೆ ಮಾಡುವುದು ನನ್ನ ಗುರಿಯಾಗಿದೆ" – ಗ್ರೇಸ್ ಆಂಟನಿ

"ಹೈಡ್ರೋಪೋನಿಕ್ಸ್‌ಗೆ ನಿಕಟ ಮೇಲ್ವಿಚಾರಣೆಯ ಅಗತ್ಯವಿರುತ್ತದೆ ಆದರೆ ಸಾಂಪ್ರದಾಯಿಕ ಕೃಷಿಯಂತೆ ಶ್ರಮದಾಯಕವಲ್ಲ. ಈ ವ್ಯವಸ್ಥೆ ಜಾರಿಗೆ ಬಂದ ನಂತರ, ಸರಿಯಾದ ಪೋಷಕಾಂಶಗಳ ಸಮತೋಲನ ಮತ್ತು ಪರಿಸರ ಪರಿಸ್ಥಿತಿಗಳನ್ನು ಕಾಪಾಡಿಕೊಳ್ಳುವುದು ಮುಖ್ಯ" ಎಂದು ಅವರು ವಿವರಿಸುತ್ತಾರೆ.



"ರುಚಿ ಮತ್ತು ಗುಣಮಟ್ಟದಲ್ಲಿನ ವ್ಯತ್ಯಾಸವು ಗಮನಾರ್ಹವಾಗಿದೆ. ನನ್ನ ಮಕ್ಕಳಿಗೆ ಸುರಕ್ಷಿತ ಮತ್ತು ಪೌಷ್ಟಿಕ ಆಹಾರವನ್ನು ಒದಗಿಸಲು ನಾನು ನನ್ನ ಮನೆಯಲ್ಲಿ ತರಕಾರಿಗಳನ್ನು ಬೆಳೆಯಲು ಪ್ರಾರಂಭಿಸಿದೆ. ರಾಸಾಯನಿಕ ಮುಕ್ತ ತರಕಾರಿಗಳನ್ನು ಹುಡುಕುತ್ತಿರುವ ಇತರರಿಗೂ ಇದನ್ನು ಏಕೆ ವಿಸ್ತರಿಸಬಾರದು? ಎಂದು ಗ್ರೇಸ್ ಅವರು ಯೋಚಿಸಿದರು.

ಅವರ ಪತಿ ಕೆವಿನ್ ಮತ್ತು ಅವರ ಸಹೋದರ ಎಬಿನ್ ಅವರ ಬೆಂಬಲದೊಂದಿಗೆ, ಅವರು ದೊಡ್ಡ ಸೆಟಪ್‌ನಲ್ಲಿ ಹೂಡಿಕೆ ಮಾಡಿದರು, ಅವರ ಮನೆಯ ಸಮೀಪವಿರುವ 12 ಸೆಂಟ್ ಜಮೀನನ್ನು ಪೂರ್ಣ ಪ್ರಮಾಣದ 2,500 ಚದರ ಅಡಿ ಹೈಡ್ರೋಪೋನಿಕ್ಸ್ ಫಾರ್ಮ್ ಆಗಿ ಪರಿವರ್ತಿಸಿದರು. ನಿಯಂತ್ರಿತ ಪರಿಸರ ತಂತ್ರಗಳನ್ನು ಬಳಸಿ, ಅವರು ಈಗ ವಿವಿಧ ರೀತಿಯ ಎಲೆಗಳ ತರಕಾರಿಗಳನ್ನು ಬೆಳೆಸುತ್ತಾರೆ. ಗ್ರೇಸ್ ಆಂಟನಿ ತಮ್ಮ ತೋಟವನ್ನು ವಿಸ್ತರಿಸಲು ಮತ್ತು ಹೆಚ್ಚಿನ ಬಗೆಯ ಮೈಕ್ರೋ ಗ್ರೀನ್‌ಗಳನ್ನು ಪರಿಚಯಿಸಲು ಯೋಜಿಸುತ್ತಿದ್ದಾರೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th MAY 2025
REGISTERED NEWS PAPER RNI 36528/79 LICENSE TO POST
WITHOUT PREPAYMENT LICENSE NO PMG/BG/WPP-46/2024-2026 AT BENGALURU PSO
BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 15-05-2025



## "ಸೇನೆಯ ನೈತಿಕತೆ ಕುಗ್ಗಿಸಲು ಬಯಸುತ್ತೀರಾ?"– ಪಹಲ್ಗಾಮ್ ದಾಳಿಯ ಅರ್ಜಿದಾರರಿಗೆ ಸುಪ್ರೀಂ ತರಾಟೆ

ಪಹಲ್ಗಾಮ್ ದಾಳಿಯ ನ್ಯಾಯಾಂಗ ತನಿಖೆಗೆ ಕೋರಿ ಸಲ್ಲಿಸಲಾದ ಅರ್ಜಿಯನ್ನು ಗುರುವಾರ ಸುಪ್ರೀಂಕೋರ್ಟ್ ವಜಾಗೊಳಿಸಿದೆ ಮತ್ತು ಅರ್ಜಿದಾರರಿಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದೆ. ಅರ್ಜಿದಾರರಾದ ಫತೇಶ್ ಕುಮಾರ್ ಶಾಹು, ಮೊಹಮ್ಮದ್ ಜುನೈದ್ ಮತ್ತು ವಿಕ್ಕಿ ಕುಮಾರ್ ಅವರು ಸೇನೆಯ ನೈತಿಕತೆಯನ್ನು ಕುಗ್ಗಿಸಲು ಬಯಸುತ್ತಿದ್ದಾರೆ ಎಂದು ಟೀಕಾ ಪ್ರಹಾರ ಮಾಡಿದೆ. ಭಯೋತ್ಪಾದನಾ ನಿಗ್ರಹಕ್ಕೆ ಸಂಬಂಧಿಸಿದ ವಿಷಯಗಳ ತನಿಖೆಯನ್ನು ನ್ಯಾಯಾಂಗವು ಏಕೆ ಮೇಲ್ವಿಚಾರಣೆ ಮಾಡಬೇಕು ಎಂದು ನ್ಯಾಯಾಲಯ ಕೇಳಿದೆ, "ಸುಪ್ರೀಂ ಕೋರ್ಟ್ ನ್ಯಾಯಾಧೀಶರು ಈ ವಿಷಯಗಳಲ್ಲಿ ತಜ್ಞರಾಗಿದ್ದಾರೆಯೇ?" ಎಂದು ಪ್ರಶ್ನಿಸಿದೆ. "ಇಂತಹ ಪಿಐಎಲ್‌ಗಳನ್ನು (ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ) ಸಲ್ಲಿಸುವ ಮೊದಲು ಜವಾಬ್ದಾರಿಯಿಂದ ನಡೆದುಕೊಳ್ಳಿ. ನಿಮಗೆ ದೇಶದ ಬಗ್ಗೆಯೂ ಕರ್ತವ್ಯವಿದೆ" ಎಂದು ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದ್ದಾರೆ. "ನೀವು ನಮ್ಮ ಪಡೆಗಳ ನೈತಿಕತೆಯನ್ನು ಕುಗ್ಗಿಸಲು ಬಯಸುತ್ತೀರಾ? ಈ ತನಿಖೆಗೆ ನಾವು ಯಾವಾಗಿನಿಂದ ಪರಿಣತಿಯನ್ನು ಪಡೆದುಕೊಂಡಿದ್ದೇವೆ?" ಎಂದಿದ್ದಾರೆ.

## ಪಠ್ಯ ಪುಸ್ತಕ, ಪುಸ್ತಕ ರವಾನೆಗೆ ಭಾರತೀಯ ಅಂಚೆಯಿಂದ 'ಜ್ಞಾನ ಅಂಚೆ' ಆರಂಭ



ಪಠ್ಯಪುಸ್ತಕ, ಗೈಡ್ ಮತ್ತು ಸಾಹಿತ್ಯ ಕೃತಿಗಳ ರವಾನೆಗಾಗಿಯೇ ಮೀಸಲಿರಿಸಿದ ಭಾರತೀಯ ಅಂಚೆ ಇಲಾಖೆಯ 'ಜ್ಞಾನ ಅಂಚೆ' ಸೇವೆ ಇದೇ ಮೇ 1ರಿಂದ ಆರಂಭವಾಗಿದೆ. ಈ ಮೊದಲು ಪಠ್ಯ ಪುಸ್ತಕ, ಗೈಡ್ ಮತ್ತು ಸಾಹಿತ್ಯ ಕೃತಿಗಳನ್ನು ಭಾರತೀಯ ಅಂಚೆಯ 'ಬುಕ್ ಪ್ಯಾಕೆಟ್' ಮತ್ತು 'ಬುಕ್ ಪೋಸ್ಟ್'ಗಳ ಮೂಲಕ ಕಳುಹಿಸಬೇಕಿತ್ತು. ಭಾರತೀಯ ಅಂಚೆ ಕಾಯ್ದೆಗೆ 2023ರಲ್ಲಿ ತಿದ್ದುಪಡಿ ತರುವ ಮೂಲಕ 'ಬುಕ್ ಪ್ಯಾಕೆಟ್' ಸೇವೆಯನ್ನು 2024ರ ಜೂನ್‌ನಲ್ಲಿ ರದ್ದುಪಡಿಸಲಾಗಿತ್ತು. 'ಬುಕ್ ಪೋಸ್ಟ್' ಸೇವೆಯ ಹೆಸರನ್ನು ಬದಲಿಸಿ, ದರವನ್ನು ಏರಿಕೆ ಮಾಡಲಾಗಿತ್ತು. ಈಗ ಭಾರತೀಯ ಅಂಚೆ ಕಾಯ್ದೆಗೆ ಮತ್ತೆ ತಿದ್ದುಪಡಿ ತಂದಿರುವ ಕೇಂದ್ರ ಸರ್ಕಾರವು, 'ಜ್ಞಾನ ಅಂಚೆ' ಸೇವೆ ಆರಂಭಕ್ಕೆ ಮುಂದಾಗಿದೆ. ಪಠ್ಯಪುಸ್ತಕ, ಸಾಹಿತ್ಯ ಕೃತಿಗಳಿಗಷ್ಟೇ ಈ ಸೇವೆ ಮೀಸಲಾಗಿದೆ. ಬಿಲ್ ಬುಕ್‌ಗಳು, ಆಹ್ವಾನ ಪತ್ರಿಕೆಗಳು, ಕರಪತ್ರಗಳು, ನಿಯತಕಾಲಿಕೆಗಳಿಗೆ ಈ ಸೇವೆ ಲಭ್ಯವಿಲ್ಲ. ಈ ಸೇವೆ ಅಡಿ ಪುಸ್ತಕಗಳನ್ನು ಕಳುಹಿಸುವವರು ಅದರ ಮೇಲೆ 'ಜ್ಞಾನ ಅಂಚೆ' ಎಂದು ಕಡ್ಡಾಯವಾಗಿ ನಮೂದಿಸಿರಬೇಕು. ಜತೆಗೆ ಕಳುಹಿಸುವವರು ಮತ್ತು ಪಡೆಯುವವರ ಜತೆಗೆ ಪ್ರಕಾಶಕರ ಹೆಸರು ಹಾಗೂ ವಿಳಾಸ ಇರಬೇಕು. ಯಾವುದೇ ವಾಣಿಜ್ಯ ಉದ್ದೇಶದ ಕರಪತ್ರ ಮತ್ತು ಬರಹ ಇರಬಾರದು. ಕನಿಷ್ಠ 300 ಗ್ರಾಂನಿಂದ ಗರಿಷ್ಠ 5 ಕೆ.ಜಿ.ವರೆಗಿನ ಪಾರ್ಸಲ್‌ಗಳನ್ನು ಮಾತ್ರ 'ಜ್ಞಾನ ಅಂಚೆ' ಎಂದು ಪರಿಗಣಿಸಲಾಗುತ್ತದೆ ಎಂದು ಅಂಚೆ ಇಲಾಖೆ ಷರತ್ತು ವಿಧಿಸಿದೆ. ಬುಕ್ ಪ್ಯಾಕೆಟ್ ಮತ್ತು ಬುಕ್ ಪೋಸ್ಟ್ ಸೇವೆಗಳ ರದ್ದತಿಯಿಂದ ಪಠ್ಯಪುಸ್ತಕ, ಸಾಹಿತ್ಯ ಕೃತಿಗಳ ರವಾನೆ ದುಬಾರಿ ಬಾಬತ್ತಾಗಿ ಬದಲಾಗಿತ್ತು. ಈ ಬಗ್ಗೆ ಪ್ರಕಾಶಕರು, ಪ್ರಕಾಶಕರ ಸಂಘಗಳು ಆಕ್ಷೇಪ ವ್ಯಕ್ತಪಡಿಸಿದ್ದವು. ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಅಂಚೆ ಇಲಾಖೆಗೆ ಪತ್ರ ಬರೆದಿತ್ತು. ಈ ಷರತ್ತುಗಳನ್ನು ಉಲ್ಲಂಘಿಸುವ ಪಾರ್ಸಲ್‌ಗಳನ್ನು, 'ಭಾರತೀಯ ಅಂಚೆ ಪಾರ್ಸಲ್' ಎಂದು ಪರಿಗಣಿಸಲಾಗುತ್ತದೆ. ಅಂತಹ ಪಾರ್ಸಲ್‌ಗಳಿಗೆ 'ಜ್ಞಾನ ಅಂಚೆ' ಶುಲ್ಕ ಮತ್ತು 'ಭಾರತೀಯ ಅಂಚೆ ಪಾರ್ಸಲ್' ಶುಲ್ಕದ ನಡುವಣ ವ್ಯತ್ಯಾಸದ ಎರಡು ಪಟ್ಟು ದಂಡ ವಿಧಿಸಲಾಗುತ್ತದೆ.

## ಒಟಿಟಿ ಪ್ಲಾಟ್‌ಫಾರ್ಮ್‌ಗಳಲ್ಲಿ ಅಶ್ಲೀಲ ವಿಷಯ: ಸುಪ್ರೀಂ ಕಳವಳ




ಒಟಿಟಿ ಪ್ಲಾಟ್‌ಫಾರ್ಮ್‌ಗಳು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿನ ಅಶ್ಲೀಲ ವಿಷಯವನ್ನು ನಿಯಂತ್ರಿಸುವಂತೆ ಕೋರಿ ಸಲ್ಲಿಸಲಾದ ಅರ್ಜಿಯನ್ನು ಸುಪ್ರೀಂಕೋರ್ಟ್ ಪರಿಗಣನೆಗೆ ತೆಗೆದುಕೊಳ್ಳಲು ಒಪ್ಪಿಕೊಂಡಿದೆ. ಈ ವಿಷಯವು ಗಂಭೀರ ಕಳವಳಗಳನ್ನು ಹುಟ್ಟುಹಾಕಿದೆ ಎಂದು ಗಮನಿಸಿದೆ. ಇದಕ್ಕೆ ಪ್ರತಿಕ್ರಿಯೆಯಾಗಿ, ಕೇಂದ್ರ ಸರ್ಕಾರವು ಇನ್ನೂ ಕೆಲವು ನಿಯಮಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ನ್ಯಾಯಾಲಯಕ್ಕೆ ತಿಳಿಸಿತು. ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯು ಪ್ರಮುಖ ಕಾಳಜಿಯ ವಿಷಯವನ್ನು ಎತ್ತಿದೆ ಎಂದು ಗಮನಿಸಿದ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಎ.ಜಿ. ಮಸಿಹ್ ಅವರನ್ನೊಳಗೊಂಡ ಪೀಠವು, ಕೇಂದ್ರ ಸರ್ಕಾರ, ಒಟಿಟಿ ಪ್ಲಾಟ್‌ಫಾರ್ಮ್‌ಗಳಾದ ನೆಟ್‌ಫ್ಲಿಕ್ಸ್, ಅಮೆಜಾನ್ ಪ್ರೈಮ್, ಆಲ್ಟ್‌ಬಾಲಾಜಿ, ಉಲ್ಲು ಡಿಜಿಟಲ್, ಮುಬಿ ಮತ್ತು ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್‌ಗಳಾದ ಎಕ್ಸ್ ಕಾರ್ಪ್, ಗೂಗಲ್, ಮೆಟಾ ಇಂಕ್ ಮತ್ತು ಆಪಲ್‌ಗೆ ನೋಟಿಸ್ ಜಾರಿ ಮಾಡಿದೆ. "ನೆಟ್‌ಫ್ಲಿಕ್ಸ್ ಇತ್ಯಾದಿಗಳಿಗೂ ಸಾಮಾಜಿಕ ಜವಾಬ್ದಾರಿ ಇದೆ" ಎಂದು ನ್ಯಾಯಮೂರ್ತಿ ಗವಾಯಿ ಮೌಖಿಕವಾಗಿ ಹೇಳಿದರು. ಅರ್ಜಿದಾರರ ಪರವಾಗಿ ಹಾಜರಾದ ವಕೀಲ ವಿಷ್ಣುಶಂಕರ್ ಜೈನ್, ಈ ವಿಷಯವು "ವಿರೋಧಿ ಮೊಕದ್ದಮೆ" ಅಲ್ಲ, ಆದರೆ "ನಿಜವಾದ ಕಾಳಜಿ"ಯನ್ನು ಎತ್ತಿದೆ ಎಂದು ವಾದಿಸಿದರು. ಯಾವುದೇ ರೀತಿಯ ನಿಯಂತ್ರಣ ಅಥವಾ ಪರಿಶೀಲನೆಗಳಿಲ್ಲದೆ ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರವಾಗುವ ವಿಷಯದ ಸಮಸ್ಯೆಯನ್ನು ಅವರು ಎತ್ತಿ ತೋರಿಸಿದರು. ಈ ನ್ಯಾಯಪೀಠವು ತನ್ನ ಆದೇಶದಲ್ಲಿ, "ಈ ಅರ್ಜಿಯು OTT ವೇದಿಕೆಗಳು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ವಿವಿಧ ಆಕ್ಷೇಪಾರ್ಹ, ಅಶ್ಲೀಲ ಮತ್ತು ಅಸಭ್ಯ ವಿಷಯಗಳ ಪ್ರದರ್ಶನಕ್ಕೆ ಸಂಬಂಧಿಸಿದಂತೆ ಒಂದು ಪ್ರಮುಖ ಕಳವಳವನ್ನು ಹುಟ್ಟುಹಾಕುತ್ತದೆ. ವಿಷಯವು ವಿಕೃತತೆಯ ಮಟ್ಟಕ್ಕೆ ಹೋಗುತ್ತದೆ ಎಂದು ಲರ್ನ್ಡ್ ಸಾಲಿಸಿಟರ್ ಜನರಲ್ ನ್ಯಾಯಯುತವಾಗಿ ಹೇಳುತ್ತಾರೆ. ಇನ್ನೂ ಕೆಲವು ನಿಯಮಗಳನ್ನು ಪರಿಶೀಲಿಸಲಾಗುತ್ತಿದೆ ಎಂದಿದ್ದಾರೆ" ಎಂದು ನ್ಯಾಯಪೀಠ ಹೇಳಿದೆ.

## ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಹೇಳಿಕೆ ನೀಡುವಾಗ ಎಚ್ಚರಿಕೆ ಇರಲಿ : ಸರ್ವೋಚ್ಚ ನ್ಯಾಯಾಲಯ

ಸ್ವಾತಂತ್ರವೀರ ವಿ.ಡಿ. ಸಾವರ್ಕರ್ ಅವರ ಕುರಿತು, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ನೀಡಿದ್ದ "ಬ್ರಿಟಿಷರ ಸೇವಕ" ಹೇಳಿಕೆಗೆ ಸುಪ್ರೀಂಕೋರ್ಟ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. "ರಾಹುಲ್ ಗಾಂಧಿ ಅವರ ಅಜ್ಜಿ, ಭಾರತದ ಮಾಜಿ ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರು, ವಿ.ಡಿ. ಸಾವರ್ಕರ್ ಅವರನ್ನು ಹೊಗಳಿ ಪತ್ರ ಬರೆದಿದ್ದರು. ಈ ಇತಿಹಾಸ ಕಾಂಗ್ರೆಸ್ ನಾಯಕರಿಗೆ ಗೊತ್ತಿಲ್ಲ ಎಂದರೆ, ನಾವು ನೆನಪು ಮಾಡಿಕೊಡುತ್ತೇವೆ" ಎಂದು ಸುಪ್ರೀಂಕೋರ್ಟ್ ಹೇಳಿದೆ. ಏಪ್ರಿಲ್ 25 (ಶುಕ್ರವಾರ)ರಂದು ನಡೆದ ವಿಚಾರಣೆಯಲ್ಲಿ, ಲಕ್ನೋ ನ್ಯಾಯಾಲಯದಲ್ಲಿ ರಾಹುಲ್ ಗಾಂಧಿ ವಿರುದ್ಧ ನಡೆಯುತ್ತಿದ್ದ ಮಾನನಷ್ಟ ಮೊಕದ್ದಮೆಯನ್ನು ಸುಪ್ರೀಂಕೋರ್ಟ್ ತಡೆಹಿಡಿದಿದೆ. ಆದರೆ, ಭವಿಷ್ಯದಲ್ಲಿ ಇಂತಹ ಹೇಳಿಕೆಗಳನ್ನು ನೀಡಿದರೆ "ಸ್ವಯಂ ಪ್ರೇರಿತ" ಕ್ರಮ ಕೈಗೊಳ್ಳುವುದಾಗಿ ರಾಹುಲ್ ಗಾಂಧಿ ಅವರಿಗೆ ಸರ್ವೋಚ್ಚ ನ್ಯಾಯಾಲಯ ಎಚ್ಚರಿಕೆ ನೀಡಿದೆ. ಪ್ರಕರಣದ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ದೀಪಂಕರ್ ದತ್ತಾ ಮತ್ತು ನ್ಯಾಯಮೂರ್ತಿ ಮನ್‌ಮೋಹನ್ ಅವರಿದ್ದ ಪೀಠ, "ವಿ.ಡಿ. ಸಾವರ್ಕರ್ ಬ್ರಿಟಿಷರ ಸೇವಕರಾಗಿದ್ದರು" ಎಂಬ ರಾಹುಲ್ ಗಾಂಧಿ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ರಾಹುಲ್ ಅವರ ಹೇಳಿಕೆಯನ್ನು ಟೀಕಿಸಿದ ನ್ಯಾಯಮೂರ್ತಿ ದೀಪಂಕರ್ ದತ್ತಾ, "ಮಹಾತ್ಮಾ ಗಾಂಧೀಜಿಯವರು ಬ್ರಿಟಿಷ್ ವೈಸ್‌ರಾಯ್ ಅವರುಗೆ ಬರೆಯುತ್ತಿದ್ದ ಪತ್ರಗಳಲ್ಲಿ "ನಿಮ್ಮ ವಿಶ್ವಾಸಿ ಸೇವಕ" ಎಂದು ನಮೂದಿಸುತ್ತಿದ್ದರು. ಹಾಗೆಂದ ಮಾತ್ರಕ್ಕೆ ಅವರನ್ನು ಬ್ರಿಟಿಷರ ಸೇವಕ ಎಂದು ಕರೆಯಲು ಸಾಧ್ಯವೇ?" ಎಂದು ಖಾರವಾಗಿ ಪ್ರಶ್ನಿಸಿದ್ದಾರೆ. "ನಿಮ್ಮ ಅಜ್ಜಿ, ಭಾರತದ ಮಾಜಿ ಮತ್ತು ಪ್ರಥಮ ಮಹಿಳಾ ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರು, ವಿ.ಡಿ. ಸಾವರ್ಕರ್ ಅವರನ್ನು ಹೊಗಳಿ ಈ ಹಿಂದೆ ಪತ್ರ ಬರೆದಿದ್ದರು. ಬಹುಶ: ರಾಹುಲ್ ಗಾಂಧಿ ಅವರಿಗೆ ಈ ಕುರಿತು ಮಾಹಿತಿಯ ಕೊರತೆ ಇರಬಹುದು. ರಾಹುಲ್ ಈ ಕುರಿತ ಇತಿಹಾಸವನ್ನು ಅರಿಯುವುದು ಉತ್ತಮ" ಎಂದು ಸುಪ್ರೀಂಕೋರ್ಟ್ ಪೀಠ ಎಚ್ಚರಿಸಿದೆ."ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಯಾರೂ ಬೇಜವಾಬ್ದಾರಿ ಹೇಳಿಕೆಗಳನ್ನು ನೀಡಬಾರದು. ನಿಮಗೆ ಭಾರತದ ಇತಿಹಾಸ ಮತ್ತು ಭೂಗೋಳದ ಬಗ್ಗೆ ಏನೂ ತಿಳಿದಿಲ್ಲ. ವಿ.ಡಿ ಸಾವರ್ಕರ್ ಓರ್ವ ದೊಡ್ಡ ವ್ಯಕ್ತಿ. ಒಂದು ರಾಜಕೀಯ ಪಕ್ಷದ ನಾಯಕ. ಅಂತಹವರ ಬಗ್ಗೆ ಈ ರೀತಿ ಅವಹೇಳನಕಾರಿಯಾಗಿ ಮಾತನಾಡುವುದು ಸರಿಯಲ್ಲ" ಎಂದು ಸುಪ್ರೀಂಕೋರ್ಟ್ ರಾಹುಲ್ ಗಾಂಧಿ ಅವರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ.

## 4 ವರ್ಷ ಸ್ಥಗಿತಗೊಂಡಿದ್ದ ಕೈಲಾಸ ಮಾನಸ ಸರೋವರ ಯಾತ್ರೆ ಜೂನ್ 30ರಿಂದ ಪುನರಾರಂಭ



ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ನಾಲ್ಕು ವರ್ಷಗಳ ಕಾಲ ಸ್ಥಗಿತಗೊಂಡಿದ್ದ ಕೈಲಾಸ ಮಾನಸ ಸರೋವರ ಯಾತ್ರೆ ಜೂನ್ 30 ರಂದು ಪುನರಾರಂಭಗೊಳ್ಳಲಿದೆ. ಈ ಯಾತ್ರೆ ಉತ್ತರಾಖಂಡ್ ಮಾರ್ಗದ ಮೂಲಕ ನಡೆಯಲಿದೆ. ಈ ಯಾತ್ರೆಯನ್ನು ಉತ್ತರಾಖಂಡ ಸರ್ಕಾರ ಮತ್ತು ವಿದೇಶಾಂಗ ಸಚಿವಾಲಯದ ಜಂಟಿ ಮೇಲ್ವಿಚಾರಣೆಯಲ್ಲಿ ಆಯೋಜಿಸಲಾಗುತ್ತಿದೆ. ಯಾತ್ರೆಯನ್ನು ನಿರ್ವಹಿಸುವ ಜವಾಬ್ದಾರಿಯನ್ನು ಕುಮಾವೂನ್ ಮಂಡಲ್ ವಿಕಾಸ್ ನಿಗಮ್ (KMVN) ಗೆ ವಹಿಸಲಾಗಿದೆ. ಪ್ರಯಾಣವು ದೆಹಲಿಯಿಂದ ಪ್ರಾರಂಭವಾಗಿ ಪಿಥೋರಗಢ ಜಿಲ್ಲೆಯ ಲಿಪುಲೇಖ್ ಪಾಸ್ ಮೂಲಕ ಚೀನಾವನ್ನು ಪ್ರವೇಶಿಸಲಿದೆ. ಒಟ್ಟು 250 ಯಾತ್ರಿಕರು ಈ ಆಧ್ಯಾತ್ಮಿಕವಾಗಿ ಮಹತ್ವದ 22 ದಿನಗಳ ಪ್ರಯಾಣವನ್ನು ಕೈಗೊಳ್ಳಲಿದ್ದಾರೆ. ಯಾತ್ರಿಕರನ್ನು ತಲಾ 50 ಯಾತ್ರಿಕರ ಐದು ಬ್ಯಾಚ್‌ಗಳಾಗಿ ವಿಂಗಡಿಸಲಾಗಿದೆ. ಮೊದಲ ಗುಂಪು ಜುಲೈ 10 ರಂದು ಚೀನಾವನ್ನು ಪ್ರವೇಶಿಸಲಿದ್ದು, ಅಂತಿಮ ಬ್ಯಾಚ್ ಆಗಸ್ಟ್ 22 ರಂದು ಹಿಂತಿರುಗಲಿದೆ. ಪ್ರಯಾಣದಲ್ಲಿ, ತನಕ್‌ಪುರ, ಧಾರ್ಚುಲಾ, ಗುಂಜಿ ಮತ್ತು ನಭಿಧಾಂಗ್‌ನಲ್ಲಿ ನಿಲುಗಡೆಗಳನ್ನು ಮಾಡಲಾಗುತ್ತದೆ. ಹಿಂದಿರುಗುವ ಹಂತದಲ್ಲಿ, ಯಾತ್ರಿಕರು ಬುಂಡಿ, ಚೌಕೋರಿ ಮತ್ತು ಅಲ್ಮೋರಾ ಮೂಲಕ ಹಾದು ದೆಹಲಿ ತಲುಪುತ್ತಾರೆ. ಎಲ್ಲಾ ಭಾಗವಹಿಸುವವರ ಆರೋಗ್ಯ ಮತ್ತು ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು, ಇಂಡೋ–ಟಿಬೆಟಿಯನ್ ಗಡಿ ಪೊಲೀಸ್ (ITBP) ನೆರವಿನೊಂದಿಗೆ ದೆಹಲಿಯಲ್ಲಿ ಮತ್ತು ಪಿಥೋರಗಢದ ಗುಂಜಿಯಲ್ಲಿ ವೈದ್ಯಕೀಯ ತಪಾಸಣೆಗಳನ್ನು ನಡೆಸಲಾಗುತ್ತದೆ.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.